ಧರ್ಮ ವಿಜ್ಞಾನ ವೈರಾಗ್ಯ ಪರಮೈಶ್ವರ್ಯ ಶಾಲಿನಃ ।
ಆನಂದತೀರ್ಥ ಭಗವತ್ಪಾದಾನ್ ವಂದೇ ನಿರಂತರಂ ॥

॥ ಶ್ರೀ ಗುರುಭ್ಯೋ ನಮಃ ॥

# ಶ್ರೀಪೂರ್ಣ ಪ್ರಜ್ಞಭಾಷ್ಯ ಭಾವ



ಸಂಗ್ರಹ – ನಿರೂಪಣೆ
ಪ್ರೊ॥ ಪಂ ॥ ಬದರೀನಾಥಾಚಾರ್ಯ ಘೂಳೀ ಎಂ.ಎ.

ಮಾಧವ ಮಧ್ವ ಪ್ರಕಾಶನ
ಬೆಂಗಳೂರು–೫೬೦ ೦೯೮
೨೦೦೭

Sri Poorna Prajna Bhasya Bhava Compiled and Edited by Prof. Pt. Badarinathacharya Ghooli M.A., Retired Professor. Published by Sri Madhava Madhwa Prakashana No. 164, “Soudamini” 7th Cross, 9th Main, BEML Layout, Rajarajeshwarinagar, Bangalore-560 089 Phone : 080-28602191

Second Print : 2007

Typeset (DTP) By
**Sri Raghavendra Enterprises**
Banashankari I Stage,
Bangalore-560 050
Phone 080-22421294



ಹರಿಃ ಓಂ

**ಧರ್ಮ ವಿಜ್ಞಾನ ವೈರಾಗ್ಯ ಪರಮೈಶ್ವರ್ಯ ಶಾಲಿನಃ ।**
**ಆನಂದತೀರ್ಥ ಭಗವತ್ಪಾದಾನ್ ವಂದೇ ನಿರಂತರಂ ॥**

॥ ಶ್ರೀ ಗುರುಭ್ಯೋ ನಮಃ ॥

# ಶ್ರೀಪೂರ್ಣ ಪ್ರಜ್ಞಭಾಷ್ಯ ಭಾವ

**ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಂ ।**
**ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾಸೂರ್ಥಮುಚ್ಯತೇ ॥**

ಭಗವಂತನಾದ ಶ್ರೀಮನ್ನಾರಾಯಣನು ವೇದಾದಿಗಳಿಂದಲೇ ಪ್ರತಿಪಾದ್ಯನಾಗಿರುತ್ತಾನೆ. ಶ್ರೀ ಹರಿಯ ವಿಷಯಕ ಜ್ಞಾನವು ಕೃತಯುಗದಲ್ಲಿ ವೇದಾಧ್ಯಯನದಿಂದಲೇ ಆಗುತ್ತಿತ್ತು. ಪರಮಾತ್ಮನಿಂದ ಉತ್ಪನ್ನವಾದ ಜ್ಞಾನವು ಯಥಾವತ್ತಾಗಿಯೇ ಇದ್ದಿತು. ತ್ರೇತಾಯುಗದಲ್ಲಿ ಸ್ವಲ್ಪ ವಿಪರೀತವಾಯಿತು. ದ್ವಾಪರದಲ್ಲಿ ಅಖಿಲವೂ ಅನ್ಯಥಾ ಜಾತವಾಯಿತು. ನಂತರ ಗೌತಮರ ಶಾಪದಿಂದ ಜ್ಞಾನವು ಪೂರ್ಣ ತೀರೋಹಿತವಾಯಿತು.

**ನಾರಾಯಣಾದ್ವಿನಿಷ್ಪನ್ನಂ ಜ್ಞಾನಂ ಕೃತಯುಗೇಸ್ಥಿತಂ ।**
**ಕಿಂಚಿದನ್ಯಥಾ ಜಾತಂ ತ್ರೇತಾಯಂ ದ್ಯಾಪರ್ರೆಖಿಲಂ ॥**
**ಗೌತಮಸ್ಯ ಋಷೇಃ ಶಾಪಾತ್ ಜ್ಞಾನೇತ್ವ ಜ್ಞಾನತಾಂಗತೇ ।**
**ಸಂಕೀರ್ಣ ಬುದ್ಧಯೋ ದೇವಾಃ ಬ್ರಹ್ಮ ರುದ್ರಪುರಸ್ಸರಾಃ ॥**
**ಶರಣ್ಯಂ ಶರಣಂ ಜಗ್ಮುಃ ನಾರಾಯಣ ಮನಾಮಯಂ ॥**
**ತ್ರೈರ್ವಿಜರ್ಾಪಿತ ಕಾರ್ಯಸ್ತು ಭಗವಾನ್ ಪುರುಷೋತ್ತಮಃ ।**
**ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್ ॥**
**ಉತ್ಸನ್ನಾನ್ ಭಗವಾನ್ ವೇದಾನುಜ್ಜಾಹಾರ ಹರಿಃ ಸ್ವಯಂ ।**
**(ಸ್ಕಾಂದೇ) ದ್ವಾಪರೇ ಸರ್ವತ್ರ ಜ್ಞಾನ**
**ಆಕುಲೀಭೂತೇ ತನ್ನಿರ್ಣಯಾಯ ॥**
**ಬ್ರಹ್ಮರುದ್ರೇಂದ್ರಾದಿಭಿಃ ಅರ್ಥಿತೋ ಭಗವಾನ್**
**ನಾರಾಯಣೋ ವ್ಯಾಸತ್ವೇನ ಅವತತಾರ ॥**

ಅಂದರೆ ಬ್ರಹ್ಮರುದ್ರೇಂದ್ರ ದೇವತೆಗಳಿಂದ ಪ್ರಾರ್ಥಿತನಾದ ಶ್ರೀಮನ್ನಾರಾಯಣನು ದ್ವಾಪರಾಂತ್ಯದಲ್ಲಿ ವೇದವ್ಯಾಸರೂಪದಿಂದ ಅವತರಿಸಿ ಸಜ್ಜನರಿಗೆ ಸಮೀಚೀನ

ಜ್ಞಾನದ್ವಾರ ಶುದ್ಧ ಸುಖರೂಪ ಮೋಕ್ಷವು ಪ್ರಾಪ್ತವಾಗಲೆಂದು ಉತ್ಪನ್ನವಾದ ವೇದಗಳನ್ನು ವಿಭಾಗ ಮಾಡಿದರು. ಕಾಲಗತಿಸಿದಂತೆ ವೇದಗಳನ್ನು ಅನ್ಯರು ಅನ್ಯಥಾ ವ್ಯಾಖ್ಯಾನ ಮಾಡಿದರು. ಕರುಣಾಳುಗಳಾದ ಶ್ರೀ ವೇದವ್ಯಾಸ ದೇವರು ವೇದಾರ್ಥ ನಿರ್ಣಾಯಕವಾದ (ವೇದಗಳ ಅರ್ಥವನ್ನು ನಿರ್ಣಯಿಸುವ) ಬ್ರಹ್ಮಸೂತ್ರಗಳನ್ನು **ಬ್ರಹ್ಮಮೀಮಾಂಸ** ರಚಿಸಿದರು. ಇಲ್ಲಿಯೂ ಸಹ ಬ್ರಹ್ಮಸೂತ್ರಗಳಿಗೆ ೨೧ ಭಾಷ್ಯಕಾರರೆಂದು ಹೇಳಿಸಿಕೊಳ್ಳಲ್ಪಟ್ಟವರು ತಮಗೆ ತೋಚಿದ ವ್ಯಾಖ್ಯಾನವನ್ನು ಬರೆದು, ನಿಜವಾದ ತತ್ವಬುಭುತ್ಸುಗಳಲ್ಲಿ ಇದೋವಾ ಅದೋವಾ ಎಂದು ಸಂದೇಹ ಪಡುವಂತೆ ಆಯಿತು. ಆ ಭಾಷ್ಯಗಳು ಭಗವಂತನಾದ ವೇದವ್ಯಾಸದೇವರ ಅಭಿಮತಕ್ಕೆ ವಿರುದ್ಧವೆ ಆಯಿತಲ್ಲದೆ ಕೆಲವೊಮ್ಮೆ ಬಾದರಾಯಣರ ಅಭಿಪ್ರಾಯಕ್ಕೆ ಪ್ರತಿಸ್ಪರ್ಧಿಯಂತೆ ಆಯಿತು. (ಸ್ವಸೂತ್ರ ಜಾತಸ್ಯ ವಿರುದ್ಧ ಭಾಷೀ ತದ್ಭಾಷ್ಯಕಾ ರೋಹಮಿತಿ ಭೃವನ್ಯಃ – ಸು.ಮ.ವಿ. ೧–೫೩) ಈ ರೀತಿ ಅನ್ಯರಿಂದ ರಚಿತವಾದ ಭಾಷ್ಯ ಬ್ರಹ್ಮಸೂತ್ರಗಳಿಗೆ ಅಪವ್ಯಾಖ್ಯಾನ ರೂಪವಾಗಿದೆ ಎಂದು ಖಂಡಿಸಿ ಶ್ರೀವೇದವ್ಯಾಸದೇವರಿಗೆ ಅಭಿಪ್ರೇತವಾದ ಭಾಷ್ಯವನ್ನು ವಾಯುದೇವರ ಅವತಾರಭೂತರಾದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು **"ಶ್ರೀ ಬ್ರಹ್ಮ ಸೂತ್ರ ಭಾಷ್ಯ"**ವನ್ನು ರಚಿಸಿ ಸಪ್ರಮಾಣಿಕವಾಗಿ ನಿರೂಪಿಸಿ, ಸಮೀಚೀನ ಜ್ಞಾನದ್ವಾರ ಸಜ್ಜನೋದ್ಧಾರ ಮಾಡಿರುತ್ತಾರೆ. ಆಚಾರ್ಯ ಮಧ್ವರ ಭಾಷ್ಯದಲ್ಲಿ ಭಾಷ್ಯದ ಎಲ್ಲಾ ಲಕ್ಷಣಗಳಿಂದ ಉಕ್ತವಾಗಿದೆ. ಶ್ರೀ ಭಾಷ್ಯದಲ್ಲಿ ೫೬೪ ಸೂತ್ರಗಳು ೨೨೩ ಅಧಿಕರಣಗಳು ಇರುತ್ತದೆ. ಬ್ರಹ್ಮಸೂತ್ರದಲ್ಲಿ ಪ್ರತಿಪಾದಿತವಾದ ಪ್ರಮೇಯಗಳು :

**ಸರ್ವದೋಷ ವಿಹೀನತ್ವಂ ಗುಣೈಸ್ಸರ್ವೇ ರುದೀರ್ಣತಾ ।**
**ಆಭೇಧಃ ಸರ್ವರೂಪೇಷು ಜೀವಭೇಧಃ ಸದೈವ ಹಿ ॥**

ಭಗವಂತನಾದ ನಾರಾಯಣನು ಉತ್ಕೃಷ್ಟವಾದ ಗುಣಗಳಿಂದ ಕೂಡಿದವನು. ಯಾವ ವಿಧವಾದ ದೋಷರಹಿತನು. ಪರಮಾತ್ಮನ ರೂಪಕ್ಕೂ ಅನೇಕ ಅವತಾರ ರೂಪಗಳಿಗೂ ಪರಸ್ಪರ ಭೇದವೂ ಇರುವುದಿಲ್ಲ. ಜೀವರುಗಳು ಪರಮಾತ್ಮನಿಂದ ಸದಾ ಭಿನ್ನರು, ಮುಕ್ತಿಯಲ್ಲಿ ತಾರತಮ್ಯವು. ಮೋಕ್ಷವಾದರೂ ಅವನ ವಿಷಯಕ ಜ್ಞಾನದಿಂದಲೇ ಲಭ್ಯವು, ಇತ್ಯಾದಿಯಾಗಿ ವರ್ಣಿತವಾಗಿದೆ.

## ಸೂತ್ರಗಳ ರಚನೆಗೆ ಮುಖ್ಯ ಕಾರಣ

ಬ್ರಹ್ಮಸೂತ್ರಗಳು ಶ್ರೀವೇದವ್ಯಾಸದೇವರಿಂದ ರಚಿತವಾಯಿತೆಂದು ಮೇಲೆ ತಿಳಿಸಲಾಗಿದೆ. ವೇದಗಳಿಗೆ ನಿಜಾರ್ಥ ಬೋಧಕವಾಗಲು ನಿರ್ಣಯಾತ್ಮಕ ಸೂತ್ರಗಳನ್ನು ರಚಿಸಿದರು. ಸರಿ, ದ್ವಾಪರಾಂತ್ಯದಲ್ಲಿ ಮತ್ತು ಕಲಿಯುಗದಲ್ಲಿ ವಿಪ್ರರ ಜ್ಞಾನವು ಏಕೆ ನಷ್ಟವಾಯಿತೆಂದು ಸ್ವಲ್ಪ ತಿಳಿಯಲು ಪ್ರಯತ್ನ ಮಾಡೋಣ.



ಒಮ್ಮೆ ಹನ್ನೆರಡು ವರ್ಷಗಳ ಕಾಲ ದೇಶದಲ್ಲಿ ಅನಾವೃಷ್ಟಿಯಿಂದ ದುರ್ಭಿಕ್ಷವಾಯಿತು. ಮಳೆಯಿಲ್ಲದೆ, ಧನ ಧ್ಯಾನಾದಿಗಳು ಅಲಭ್ಯವಾಯಿತು. ಇದರಿಂದ ಋಷಿಮುನಿಗಳು ತಮ್ಮ ನಿತ್ಯ ಯಜ್ಞ ಯಾಗಾದಿಗಳಿಗೆ ಚರು ಆಜ್ಯಾದಿಗಳು ದೊರೆಯದೆ ಕಂಗಾಲಾದರು. ಆ ಸಮಯದಲ್ಲಿ ಮಹಾತಪಸ್ವಿಗಳೂ, ಮುನಿಶ್ರೇಷ್ಠರೂ ಆದ ಗೌತಮರ ಪ್ರದೇಶದಲ್ಲಿ ಸುಭಿಕ್ಷೆ ಇದ್ದಿತು. ಇದನ್ನು ಅರಿತ ಇತರೆ ಮುನಿಗಳು ತಮ್ಮ ತಮ್ಮ ಅಗ್ನಿಗಳ ಸಹಿತ ಗೌತಮರ ಆಶ್ರಮಕ್ಕೆ ತೆರಳಿ ಆಶ್ರಯ ಪಡೆದರು. ಗೌತಮರಿಗೆ ಅತ್ಯಾನಂದವಾಯಿತು. ಒಮ್ಮೆಲೆ ಇಷ್ಟೊಂದು ಜ್ಞಾನಿಗಳು ಮುನಿಗಳು ತಮ್ಮ ಆಶ್ರಮಕ್ಕೆ ಬಂದವರನ್ನು ಆದರದಿಂದ ಬರಮಾಡಿಕೊಂಡು ಯಥೋಚಿತ ಆತಿಥ್ಯವನ್ನು ಕೊಡುತ್ತಾ, ಎಷ್ಟು ಕಾಲ ಬೇಕಿದ್ದರೂ ನಿಶ್ಚಿಂತರಾಗಿ ನಿಮ್ಮ ನಿಮ್ಮ ಸಾಧನಾದಿಗಳನ್ನು ಅವಶ್ಯ ಮಾಡಿರೆಂದು ಹೇಳಿದರು.

ಕಾಲಕ್ರಮೇಣ ದೇಶದಲ್ಲಿ ಮಳೆಯಾಗಿ ಸುಭೀಕ್ಷವು ಪ್ರಾಪ್ತವಾಯಿತು. ಮುನಿಗಳು ತಮ್ಮ ಪ್ರದೇಶದಲ್ಲಿ ಮಳೆ ಆಗಿದೆ ಎಂದು ತಿಳಿದು ೧೨ ವರ್ಷ ಸುಖವಾಗಿ ಇಲ್ಲೇ ಇದ್ದುದಾಯಿತು. ತಮ್ಮ ಆಶ್ರಮಗಳಿಗೆ ಮರಳಿ ಹೋಗಬೇಕೆಂದು ಮುನಿಗಳು ಗೌತಮರಲ್ಲಿ ವಿನಂತಿಸಿದರು. ಇಷ್ಟು ದೀರ್ಘ ಕಾಲ ತಮ್ಮ ಆಶ್ರಮದಲ್ಲಿದ್ದುದರ ಪರಿಣಾಮವಾಗಿ ಗೌತಮರಿಗೆ ಮುನಿಗಳೊಂದಿಗೆ ನಿಕಟ ಸಂಬಂಧ ಬೆಳೆದಿತ್ತು. ಈಗ ಏಕಾಏಕಿ ಹೊರಟರೆ ಆಶ್ರಮವು ಶೂನ್ಯವಾಗುತ್ತದೆಂದು ಅನುಮತಿ ಕೊಡಲಿಲ್ಲ. ಎಷ್ಟು ಸಲ ಕೇಳಿದರೂ ಗೌತಮರು ಅನುಮತಿಯನ್ನು ಮುಂದಕ್ಕೆ ಹಾಕುತ್ತಾ ಬಂದರು.

ಗೌತಮರು ತಮಗೆ ಹೊರಡಲು ಆಜ್ಞೆ ನೀಡಲಾರರು ಎಂದು ಯೋಚಿಸಿ, ಒಂದು ಉಪಾಯವನ್ನು ಮಾಡಿದರು. ಗೌತಮರಿಗೆ ಸಾಕಷ್ಟು ಹೊಲಗದ್ದೆಗಳಿದ್ದು ಪೈರು ಚೆನ್ನಾಗಿ ಬೆಳೆದಿತ್ತು. ಆ ಹೊಲದಲ್ಲಿ ಮುನಿಗಳು ಒಂದು ಮಾಯಾಗೋವನ್ನು ಸೃಷ್ಟಿಸಿ ಪೈರನ್ನು ಮೇಯುವಂತೆ ಮಾಡಿದರು. ಗೌತಮರು ತಮ್ಮ ಫಸಲನ್ನು ವೀಕ್ಷಿಸುವುದಕ್ಕಾಗಿ ತೆರಳಿದಾಗ ಆಕಳೊಂದು ಪೈರು ತಿನ್ನುವುದನ್ನು ಕಂಡು ಒಂದು ಕುಶವನ್ನು ತೆಗೆದು ಗೋವನ್ನು ಓಡಿಸಲು ಮುಟ್ಟಿದರು. ತಕ್ಷಣವೇ ಗೋವು ಮೃತವಾಯಿತು. ಗೌತಮರಿಗೆ ದಿಗ್ಭ್ರಾಂತಿಯಾಯಿತು. ಈ ದೃಶ್ಯವನ್ನು ಕಂಡ ಋಷಿಗಳು "ಗೌತಮರೇ ನಿಮಗೆ ಗೋಹತ್ಯಾ ದೋಷ ಬಂದಿದೆ. ಅಂಥವರಲ್ಲಿ ಭೋಜನಾದಿಗಳನ್ನು ಮಾಡಬಾರದೆಂದು ಆ ಗೋವನ್ನು ಪುನರುಜ್ಜೀವನ ಮಾಡುವವರೆಗೂ ನೀವು ನಖಾತಿಗಳಾಗಿರುತ್ತೀರಿ" ಎಂದು ಹೇಳಿ ಋಷಿಗಳು ತಮ್ಮತಮ್ಮ ಆಶ್ರಮಗಳಿಗೆ ತೆರಳಿದರು. ಹರಿತಪ್ತರಾದ ಗೌತಮರು ಸ್ವಲ್ಪ ಸಮಯಾ ನಂತರ ದೀರ್ಘವಾಗಿ ಜ್ಞಾನದೃಷ್ಟಿಯಿಂದ ಯೋಚಿಸಿದಾಗ ಬ್ರಾಹ್ಮಣರು ಮಾಡಿದ ವಂಚನೆ ಗೋಚರವಾಯಿತು. ಕುಪಿತರಾಗಿ ಬ್ರಾಹ್ಮಣರೇ ಈ ರೀತಿ ವಂಚನೆ ಮಾಡಿದುದಕ್ಕೆ ನಿಮ್ಮ ಜ್ಞಾನವು ನಾಶವಾಗಲಿ, ತಿರೋಹಿತವಾಗಲೆಂದು ಶಾಪವನ್ನಿತ್ತರು.

ಬ್ರಾಹ್ಮಣರು ಜ್ಞಾನಶೂನ್ಯರಾದರಲ್ಲಾ ಇವರಿಗೆ ಸದ್ಗತಿ ಹೇಗೆ ಆದೀತೆಂದು ದೇವತೆಗಳಿಗೆ ಯೋಚನೆಯಾಗಿ, ಬ್ರಾಹ್ಮಣರಿಗೆ ಜ್ಞಾನವೇ ಮುಖ್ಯ. ''ಜ್ಞಾನತೋ ವಿಪ್ರಃ ಶ್ರೇಷ್ಟ'' ಎಂಬಂತೆ ಜ್ಞಾನಸಹಿತ ಯಜ್ಞಯಾಗ ಅಧ್ಯಯನ ತಪಸ್ಸುಗಳು ಸಾಧ್ಯ ಮರಳಿ ಇವರಿಗೆ ಜ್ಞಾನವು ಲಭ್ಯವಾಗಬೇಕೆಂದು ಕಳಕಳಿಯಿಂದ ದೇವತೆಗಳು ಬ್ರಹ್ಮದೇವನನ್ನು ಮುಂದು ಮಾಡಿಕೊಂಡು ಶ್ರೀಮನ್ನಾರಾಯಣನಿಗೆ ಶರಣು ಹೋದರು. ಭಗವಂತನು ಅವರ ಪ್ರಾರ್ಥನೆಯನ್ನು ಮನ್ನಿಸಿ ಶ್ರೀವೇದವ್ಯಾಸ ರೂಪದಿಂದ ದ್ವಾಪರಯುಗದ ಮಧ್ಯದಲ್ಲಿ ಪ್ರಾದುರ್ಭೂತನಾದನು. ಆದ ಪಾಠಗಳಿಂದ ತಿರೋಹಿತವಾದ ವೇದಗಳನ್ನು ಸುಸ್ವರ ಪಾಠಗಳೊಡನೆ ಅಭಿವ್ಯಕ್ತಿ ಮಾಡಿ ನಾಲ್ಕು ವೇದಗಳನ್ನಾಗಿ ವಿಭಾಗಿಸಿದರು. ಆ ವೇದಗಳ ನಿಜಾರ್ಥವನ್ನು, ಪರಬ್ರಹ್ಮ ಸ್ವರೂಪವನ್ನು ನಿರ್ಣಯಿಸುವ ಯುಕ್ತಿಗಳಿಂದ ಕೂಡಿದ ಬ್ರಹ್ಮ ಮೀಮಾಂಸ ಶಾಸ್ತ್ರವನ್ನು ರಚಿಸಿದರು. **''ಪ್ರಾದುರ್ಭೋತೋ ಹರಿರ್ದಾಸೋ ವಿರಿಂಚಿಭವ ಪೂರ್ವಕೈಃ । ಅರ್ಥಿತ ಪರವಿದ್ಯಾಖ್ಯಾಂ ಚಕ್ರೆ ಶಾಸ್ತ್ರಮನುತ್ತಮಂ ॥''** (ನವಿದ್ಯತೇ ನಾಸ್ತಿ ಉತ್ತಮಂ ಶಾಸ್ತ್ರಂ ಯಸ್ಮಾತ್ ಇತಿ ಅನುತ್ತಮಂ) ಸರಿಸಮಾನವಿಲ್ಲದ ಮತ್ತು ಇದಕ್ಕಿಂತ ಅನ್ಯ ಉತ್ಕೃಷ್ಠವಾದ ಶಾಸ್ತ್ರವು ಇರುವುದಿಲ್ಲ.

ವೇದಾರ್ಥ ನಿರ್ಣಾಯಕ ಬ್ರಹ್ಮಸೂತ್ರಗಳನ್ನು ರಚಿಸಿದ್ದಾಯಿತು. ಆದರೆ ಸೂತ್ರಗಳೆಂದರೇನು ? ಅವುಗಳ ಪ್ರಾಮಾಣ್ಯ ಹೇಗೆ ? ಬ್ರಹ್ಮಸೂತ್ರಗಳಿಗೆ ಆಚಾರ್ಯ ಶ್ರೀಮಧ್ವರ ಪೂರ್ವದಲ್ಲಿ ಭಾಷ್ಯಕಾರರು ಇದ್ದರೆ ? ಅವರು ಎಷ್ಟು ಜನ ? ಶ್ರೀ ಮಧ್ವಾಚಾರ್ಯರು ಮತ್ತೊಂದು ಭಾಷ್ಯವನ್ನು ಬರೆಯುವುದಕ್ಕೆ ಕಾರಣವೇನು ? ಭಾಷ್ಯ ಅಂದರೆ ಏನು ? ಅದರಲ್ಲಿ ಎಷ್ಟು ಅಧಿಕರಣಗಳಿವೆ ? ಅಧಿಕರಣ ಎಂದರೇನು? ಶ್ರೀಮದಾನಂದತೀರ್ಥರ ಭಾಷ್ಯದ ವೈಶಿಷ್ಟ್ಯ, ಉತ್ತಮತೆ ವಿಚಾರ ಒಂದೊಂದೂ ಅಧ್ಯಾಯದಲ್ಲಿ ಏನನ್ನು ತಿಳಿಸಿರುತ್ತಾರೆ ? ಶ್ರೀಮದಾಚಾರ್ಯರ ಭಾಷ್ಯ ಪಠನ ಅಧ್ಯಯನ ಇದರ ಫಲ ಏನು ? ಇತ್ಯಾದಿಗಳನ್ನು ಸೂಕ್ಷ್ಮವಾಗಿ ವಿಚಾರ ಮಾಡೋಣ.

## ಬ್ರಹ್ಮಸೂತ್ರಗಳು :

ಬ್ರಹ್ಮ ಶಬ್ದಕ್ಕೆ ಮುಖ್ಯ ಅರ್ಥ ನಾರಾಯಣನೇ ಮತ್ತೂ 'ಬ್ರಹ್ಮ' ಅಂದರೆ ವೇದಗಳೆಂದು ಅರ್ಥ ಇದೆ. ಆ ನಾರಾಯಣನ ಜ್ಞಾನವಾಗಬೇಕೆಂದರೆ ವೇದಾಧ್ಯಯನದಿಂದಲೇ. ವೇದಪ್ರತಿಪಾದ್ಯನೆಂದು, ಅಂತಹ ಬ್ರಹ್ಮಸ್ವರೂಪವನ್ನು ನಿರ್ಣಯ (ವ್ಯಾಖ್ಯಾನ) ಮಾಡುವುದಕ್ಕೆ ಬ್ರಹ್ಮಸೂತ್ರಗಳೆಂದು ಹೆಸರು.

## ಸೂತ್ರ ಅಂದರೆ :

**ಅಲ್ಪಾಕ್ಷರಂ ಅಸಂದಿಗ್ಧಂ ಸಾರವದ್ವಿಶ್ವತೋಮುಖಂ**
**ಅಸ್ತೋಭಂ ಅನವದ್ಯಂಚ ಸೂತ್ರಂ ಸೂತ್ರವಿದೋವಿದುಃ ॥**



ಸೂತ್ರಗಳಲ್ಲಿ ವಿವಿಕ್ಷಿತಾರ್ಥ ಸಿದ್ಧಿಗಾಗಿ ಅವಶ್ಯವಾದಷ್ಟು ಮಾತ್ರ ಅಕ್ಷರಗಳ ಪ್ರಯೋಗವಿರಬೇಕು. ಅರ್ಥೈಸುವಲ್ಲಿ ಸಂದೇಹಕ್ಕೆ ಅವಕಾಶವಿರಬಾರದು. ಅರ್ಥವು ವಿಶಿಷ್ಠವಾಗಿರಬೇಕು. ಬಹುಶಾಖೆಗಳ ಅರ್ಥವು ನಿರ್ಣಿತವಾಗಿರಬೇಕು. ಅನಾವಶ್ಯಕ ಅಕ್ಷರಗಳು ಇರಬಾರದು ಮತ್ತು ಅಪಶಬ್ದಗಳು ಇರಬಾರದು. ಇಂಥಾದ್ದಕ್ಕೆ ಸೂತ್ರವೆಂದು ಜ್ಞಾನಿಗಳು ತಿಳಿಸಿರುತ್ತಾರೆ. ಶ್ರೀ ಬಾದರಾಯಣರ ಮತಾನುಸಾರಿ, ಪ್ರಮಾಣವು ಸ್ವಾಭಾವಿಕ, ಸಹಜವೇ. ''ನವಿಲಕ್ಷಣತ್ವಾತ್'' (ಬ್ರಹ್ಮಸೂತ್ರ ೨-೧-೪) ಸೂತ್ರಬಲದಿಂದ ಸ್ವತಃ ಪ್ರಾಮಾಣ್ಯವನ್ನು ನಿರೂಪಿಸಲಾಗಿದೆ. ಪ್ರಾಮಾಣ್ಯವನ್ನು ಸೂಚಿಸುವುದಕ್ಕಾಗಿ ಎಲ್ಲಾ ಅನುಮಾನಗಳ ಪ್ರಯತ್ನವು, ಅನುಮಾನಗಳಿಗೂ, ಸೂತ್ರಗಳಿಗೂ ವಿರೋಧವಿರುವುದಿಲ್ಲ. ಒಟ್ಟಿನಲ್ಲಿ ಶ್ರೀ ಬಾದರಾಯಣರ ಸೂತ್ರಗಳು ಉತ್ಕೃಷ್ಠ ಪ್ರಮಾಣವೆಂದು ತಿಳಿಯಬೇಕು.

## ಸೂತ್ರಪ್ರಾಮಾಣ್ಯ :

ಸೂತ್ರಗಳನ್ನು ಸಾಕ್ಷಾತ್ ಭಗವಂತನಾದ ವೇದವ್ಯಾಸ ದೇವರೇ ರಚಿಸಿದ್ದಾರೆ. ಅವರಿಗೆ ಮೋಸ ಮಾಡಬೇಕೆಂಬ ಅಪೇಕ್ಷೆ ಇಲ್ಲ. ಪರಮಾಪ್ತರಾದ ಭಗವಂತನು ರಚಿಸಿದನೆಂದರೆ ಶ್ರೇಷ್ಠ ಪ್ರಮಾಣವೇ ಆಗಿರುತ್ತೆ. ಕಾರಣ ಅವರಷ್ಟು ಪರಮಾಪ್ತರು ಬೇರೊಬ್ಬರಿಲ್ಲ. ನಿರ್ದೋಷರು ಪ್ರಮಾಣ ಪ್ರಮಿತವಾದುದನ್ನು ಯಥಾಸ್ಥಿತವಾಗಿ ನುಡಿಯುವವರೇ ಆಪ್ತರು. ಆಪ್ತ ವಾಕ್ಯತ್ವವನ್ನು ಪರಂಪರಾಕ್ರಮವನ್ನು ಏತಕ್ಕಾಗಿ ಅವಲಂಬಿಸಿದರು ಎಂಬ ಶಂಕೆ ಬರುವುದು ಮತ್ತು ಪಕ್ಷವು ತನ್ನ ಅನುಕೂಲದಂತೆ ಏಕೆ ಬರೆದಿರಬಾರದು ? ವಂಚನೆ ಮಾಡಲೂ ಸಹ ಇರಬಾರದೇಕೆ ? ತಸ್ಮಾತ್ ಅಂಥವರ ವಚನವು ಪ್ರಮಾಣತ್ವೇನ ಹೇಗೆ ಅಂಗೀಕರಿಸಬೇಕೆಂಬ ಸಂಶಯ ಪಡಬಾರದು. ಕಾರಣ ''ಯದ್ಯಪಿ ಪ್ರಾಮಾಣ್ಯಂ ಸ್ವತಃ ....ವೇತಿ ಬಾದರಾಯಣೀಯಂ ಮತಮ್ । ಯದ್ವಕ್ಷ್ಯತಿ ನ ವಿಲಕ್ಷಣತ್ವಾದಿತಿ ॥ ಜೈಮಿನಿರಪಿ ತತ್ಪ್ರಾಮಣ್ಯಂ ಬಾದರಾಯಣಸ್ಯ ಅನಪೇಕ್ಷತ್ವಾದಿತಿ ................................................ ಇತಿ ಅವಿರೋದಃ'' (ಶ್ರೀಮನ್ನ್ಯಾಯಸುಧಾ ೫)

''ಶ್ರೀಮದಾಚಾರ್ಯರ ಪೂರ್ವದಲ್ಲಿ'' ಸೂತ್ರಗಳಿಗೆ ೨೧ ಭಾಷ್ಯಕಾರರು ಇದ್ದರು. ಅವರುಗಳಲ್ಲಿ ಅದ್ಯಾಪಿ ಸ್ವಲ್ಪ ಮಟ್ಟಿಗೆ ಪ್ರಚಲಿತವಾಗಿರುವುದು ಶ್ರೀಮತ್ ಶಂಕರ ಭಾಷ್ಯ, ಶ್ರೀ ರಾಮಾನುಜ ಭಾಷ್ಯ ಮತ್ತು ವಲ್ಲಭಾಚಾರ್ಯರು.

## ಶ್ರೀಮದಾನಂದತೀರ್ಥರು ಭಾಷ್ಯ ರಚಿಸಲು ಕಾರಣ :

ಶ್ರೀಮದಾಚಾರ್ಯರು ಶ್ರೀಮನ್ನಾರಾಯಣನ ದರ್ಶನಕ್ಕಾಗಿ ಬದರಿಕಾಶ್ರಮಕ್ಕೆ ತೆರಳಿದರು. ಭಗವಂತನನ್ನು ನೋಡಿ ಆನಂದ ಪರವಶರಾಗಿ ಪರಮಾತ್ಮನ ಗುಣಗಾನ ಮಾಡಿದರು. ಭಗವಂತನು ಆಚಾರ್ಯರ ಸ್ತುತಿ ಕೇಳಿ ಪ್ರೀತರಾಗಿ ವಿನಯದಿಂದ ಬಾಗಿ ಕೂತ ಆಚಾರ್ಯರ ಸುಂದರ ಮುಖವನ್ನು ನೋಡಿ ಏಕಾಂತದಲ್ಲಿ ಹೇಳಿದರು.

**ಶೃಣು ದೇವ ಕಾರ್ಯ ಮವಧಾರ್ಯ ಧೈರ್ಯದಾನ್ ।**
**ಮಮದೀರ್ಯಮಾಣ ಮಿದಮಾರ್ಯಸಂಮತಂ ॥**
**ಭವಿತಾನ್ಯದುಷ್ಕರತಂ ವಿಧಾಯ ಯತ್ ।**
**ತರುಣಂ ತವಾವತರಣಂ ಮಹಾಫಲಂ ॥**
**ಅವಿಧಾಯ ಸೂತ್ರಹೃದಯಂ ಸತಾಂಪ್ರಿಯಂ ।**
**ಪ್ರವಿಧಾಯ ಭಾಷ್ಯಮಧುನಾ ನಿಜೇಚ್ಛಯಾ ॥**
**ಅಪರೈಃ ಶೃತಿಸ್ಮೃತಿ ನಿಜಾರ್ಥ ದೋಷಕೈಃ ।**
**ಸುತರಾಂ ತಿರೋಬವತಿ ಸಂವಿದಾಹತಾ ॥**
**ಅಪನೇತುಮೇನ ಮನಯಂ ಕೃತಂ ಖಲೈಃ ।**
**ಪ್ರತಿನೇತು ಮಾತ್ಮ ಜನತಾಂ ಶುಭಾಂ ಗತಿಂ ॥**
**ಕುರು ಸೂತ್ರಭಾಷ್ಯಮವಿಲಂಬಿತಂ ವ್ರಜೇಃ ।**
**ಸುಮತೇನ ಯೋಜಯ ಕವೇ ಶೃತಿಸ್ಮೃತೀಃ ॥ (ಸು.ಮ.ವಿ. ೮–೪೩–೪೬)**

ಹೇ ಆನಂದತೀರ್ಥರೇ ! ನಾನು ನಿರ್ಧರಿಸಿದ ಮಾತನ್ನು ಧೈರ್ಯಶಾಲಿಗಳಾದ ನೀವು ಕೇಳಿರಿ. ನನ್ನ ಮಾತು ಶ್ರೀವೇದವ್ಯಾಸರಿಗೂ ಸಮ್ಮತವಾಗಿರುತ್ತೆ. ದೇವತಾ ಕಾರ್ಯಕ್ಕೆ ಅನುಕೂಲವಾಗುವಂಥಾದನ್ನು ನೀವಲ್ಲದೆ ಅನ್ಯರು ನನ್ನ ಅಭಿಮತವಾದ ಬ್ರಹ್ಮನು ಗುಣಪೂರ್ಣನು, ನಿರ್ದೋಷನು ಎಂಬ ತತ್ವವನ್ನು ಯಥಾವತ್ತಾಗಿ ತಿಳಿಸಲು ಅಸಮರ್ಥರಾಗಿರುತ್ತಾರೆ ಮತ್ತು ನಿಮ್ಮ ಈ ಮೂರನೇ ಅವತಾರದ ಪ್ರಯೋಜನವನ್ನು ಸಾಧಿಸಿದಂತಾಗುವುದು.

**ವೇದಾಂತ ಮಾರ್ಗ ಪರಿಮಾರ್ಗಣದೂನಾ ।**
**ದೈವೀಃ ಪ್ರಜಾ ವಿಶರಣಾಪದಂ ನಃ ॥**
**ಆನಂದಯೇಃ ಸುಮುಖ ಭೂಷಿತ ಭೂಮಿಭಾಗೋ ।**
**ರೂಪಾಂತರೇಣ ಮಮ ಸದ್ಗುಣ ನಿರ್ಣಯೇನ ॥ (ಸು.ಮ.ವಿ. ೨–೩)**

ಈ ಕಲಿಕಾಲದಲ್ಲಿ ದುರ್ವಾದಿಗಳು ವೇದ, ಉಪನಿಷತ್ತು ಮತ್ತು ಸೂತ್ರಗಳಿಗೆ ಸರಿಯಾದ ಅರ್ಥವನ್ನು ತಿಳಿಸದೆ ಸಜ್ಜನ ವೃಂದಕ್ಕೆ ವಂಚನೆ ಮಾಡಿದ್ದಾರೆ. ಅವರು ತಮಗೆ ತೋಚಿದ ಅರ್ಥವನ್ನು ಭಾಷ್ಯ ಎಂಬ ಹೆಸರನ್ನಿಟ್ಟು ಅಮೂಲ್ಯ ಗ್ರಂಥಗಳ ತಾತ್ಪರ್ಯವನ್ನು ಕೆಡಿಸಿದ್ದಾರೆ. ಆದ್ದರಿಂದ ಈ ಭಾರತದಲ್ಲಿ ತತ್ವಜ್ಞಾನವು ನಷ್ಟವಾಗಿದೆ. ತಸ್ಮಾತ್ ಜ್ಞಾನಿಶ್ರೇಷ್ಠರಾದ ಪೂರ್ಣಪ್ರಜ್ಞರೇ, ದುರ್ಮಾರ್ಗರು ರಚಿಸಿದ ದುಶ್ಯಾಸ್ತ್ರಗಳನ್ನು ನೀವು ಖಂಡಿಸಿ, ಭಗವದ್ಭಕ್ತರಾದ ಸಜ್ಜನರಿಗೆ ಸಮೀಚೀನ ಜ್ಞಾನ ಪ್ರದಾನ ಮಾಡಿ ಮೋಕ್ಷಮಾರ್ಗವನ್ನು ತೋರಿಸಬೇಕು. ಅದಕ್ಕಾಗಿ ಸೂತ್ರಗಳಿಗೆ ಉತ್ಕೃಷ್ಠವಾದ ನಿರ್ದಿಷ್ಟವಾದ ಭಾಷ್ಯವನ್ನು ಶೃತಿ ಸ್ಮೃತಿ ಸೂತ್ರಗಳಲ್ಲಿರುವ ಯಥಾರ್ಥ



ಸಿದ್ಧಾಂತವನ್ನು ಪ್ರಕಟಗೊಳಿಸಿರಿ ಎಂದು ಶ್ರೀಮದಾಚಾರ್ಯರು ಭಗವಂತನಿಂದ ಆಜ್ಞಾಪ್ತರಾಗಿ ಬ್ರಹ್ಮಸೂತ್ರಗಳಿಗೆ ಸತ್ಪ್ರಮಾಣಿಕವಾಗಿ **ಶ್ರೀಮದ್ಭಾಷ್ಯ**ವನ್ನು ರಚಿಸಿದರು.

"ಏಕವಿಂಶತಿ ಕು ಭಾಷ್ಯ ದೂಷಕಂ । ಬ್ರಹ್ಮ ಸೂತ್ರ ಗಣ ಭಾಷ್ಯಮದ್ಭುತಂ" ೨೧ ದುರ್ಭಾಷ್ಯಗಳನ್ನು ಸಂಯುಕ್ತಿಕವಾಗಿ ಪ್ರಮಾಣಗಳಿಂದ ಖಂಡಿಸಿ ನಿಜಾರ್ಥದ್ಯೋತಕವಾದ ಭಾಷ್ಯವನ್ನು ರಚಿಸಿದರು.

## ಭಾಷ್ಯ ಎಂದರೇನು ?

**"ಸೂತ್ರಾರ್ಥಃ ವರ್ಣ್ಯತೇಯತ್ರ ಪದೈಃ ಸೂತ್ರಾನುಸಾರಿಭೀ ಸ್ವಪದಾನಿ ಚ ವರ್ಣ್ಯಂತೆ ಭಾಷ್ಯಂ ಭಾಷ್ಯವಿದೋ ವಿದುಃ"** ಭಾಷ್ಯವು ಸೂತ್ರಾನುಸಾರಿ ಅರ್ಥವಿರಬೇಕು. ಸೂತ್ರಪದಗಳನ್ನೇ ಅನುಸರಿಸಿ ಅರ್ಥೈಸಬೇಕು. ಇಂಥದಕ್ಕೆ ಭಾಷ್ಯ ಎಂದು ಜ್ಞಾನಿಗಳು ತಿಳಿದಿರುತ್ತಾರೆ. ಶ್ರೀಮದಾಚಾರ್ಯರ ಭಾಷ್ಯದಲ್ಲಿ ಈ ಎಲ್ಲಾ ಗುಣಗಳನ್ನೂ ಕಾಣುತ್ತೇವೆ.

## ಶ್ರೀಮದಾಚಾರ್ಯರ ಭಾಷ್ಯದ ಗಾಂಭೀರ್ಯ ಮತ್ತು ಉತ್ತಮತೆ

**ಕವೀಂದ್ರೈರ್ನ ಸಮಾಪ್ಯಂತೇ । ಸಂಗೃಹ್ಯಾಪಿ ಯತೋ ಅನಿಶಂ । ನ್ಯಾಯ–ರತ್ನಾನಿ ಭಾಷ್ಯಾಬ್ಧೇರಸ್ಯ ಗಾಂಭೀರ್ಯ ಮದ್ಭುತಂ ॥ (ಸು.ಮ.ವಿ. ೧೫–೭೩)**

ಆಚಾರ್ಯರೇ, ನಿಮ್ಮಿಂದ ರಚಿತವಾದ ಭಾಷ್ಯವು ಸಮುದ್ರದಂತೆ ಗಂಭೀರವಾಗಿರುತ್ತೆ. ಜ್ಞಾನಿ ಶ್ರೇಷ್ಠರು ಭಾಷ್ಯದಲ್ಲಿ ಉಕ್ತವಾದ ಸ್ಮೃತಿ, ಲಿಂಗ, ಉಪಕ್ರಮ, ಉಪಸಂಹಾರಾದಿ ನಿರವಕಾಶ ತತ್ವಗಳಂತಿರುವ ಮಣಿರತ್ನಗಳನ್ನು ಎಷ್ಟು ಸಂಗ್ರಹಿಸಿದರೂ ಅಂತ್ಯವೇ ಕಾಣದಂತಾಗಿದ್ದಾರೆ. ಇಂತಹ ಅಮೋಘವಾದ ಭಾಷ್ಯದ ಗಾಂಭೀರ್ಯವನ್ನು ಏನೆಂದು ವರ್ಣಿಸಲಿ.

## ಶ್ರೀಮದಾಚಾರ್ಯರ ಭಾಷ್ಯ ಅಧ್ಯಯನದಿಂದ ಲಭಿಸುವ ಫಲ :

**ಮಹಾನಂದ ತೀರ್ಥಸ್ಯ ಯೋ ಭಾಷ್ಯಭಾವಂ**
**ಮನೋ ವಾಗ್ಭಿರಾವರ್ತಯಂತೆ ಸ್ವಶಕ್ತ್ಯಾ ।**
**ಸುರಾದ್ಯಾ ನರಾಂತ ಮುಕುಂದ ಪ್ರಸಾದಾದಿಮಂ**
**ಮೋಕ್ಷಮೇತೇ ಭಜಂತೇ ಸದೇತಿ ॥ (ಸು.ಮ.ವಿ. ೧೧–೭೬)**

ಜೀವೋತ್ತಮರಾದ ಶ್ರೀಮದಾನಂದತೀರ್ಥರ ಬ್ರಹ್ಮಸೂತ್ರ ಭಾಷ್ಯದ ಅರ್ಥ, ಭಾವವನ್ನು ತಮ್ಮ ಯೋಗ್ಯತಾನುಸಾರ ಮನಸ್ಸಿನಿಂದಲೇ ಮನನ ಮಾಡುತ್ತಾ ಹೇಳುತ್ತಾರೋ ಅವರು ದೇವೋತ್ತಮರಿಂದ ಆರಂಭಿಸಿ ಮನುಷ್ಯಾಧಮರವರೆಗೂ

ಭಗವಂತನಾದ ಮುಕುಂದನ ಅನುಗ್ರಹದಿಂದ ಮೋಕ್ಷದಲ್ಲಿ ಪೂಜನೀಯರಾಗುತ್ತಾರೆ. ಇದು ಸತ್ಯ. ಅದೂ ಅಲ್ಲದೆ

**''ಗಂಗಾ ಮಂಗಲ ತರಂಗ ಭಂಗದ । ಪ್ರಾಂತಸು ಶ್ರೀ ಹರಿವೇಶ್ಮ ಕೃತ್ಸಮಃ।**
**ಯದ್ಗತೈಕತಮ, ವರ್ಣ ಲೇಖಕಃ । ಸತ್ಯತೀರ್ಥ ಇಹ ಭಾಷ್ಯಮಾಲಿಖತ್॥**

(ಸು.ಮ.ವಿ. ೯–೧೩)

ಶ್ರೀಮದಾಚಾರ್ಯರು ರಚಿಸಿದ ಭಾಷ್ಯದ ಒಂದೊಂದು ಅಕ್ಷರ, ವರ್ಣವನ್ನು ಬರೆದವನು ಪವಿತ್ರ ಗಂಗಾತೀರದಲ್ಲಿ ಶ್ರೀ ವಿಷ್ಣು ಆಲಯವನ್ನು ನಿರ್ಮಿಸಿದ ಸಮಾನ ಪುಣ್ಯಕ್ಕೆ ಪಾತ್ರರಾಗುವನು. ಇಂತಹ ಉತ್ತಮೋತ್ತಮ, ಅತ್ಯಂತ ಮಂಗಳಕರವಾದ ಭಾಷ್ಯವನ್ನು ಆಚಾರ್ಯರ ಶಿಷ್ಯರಾದ ಶ್ರೀ ಸತ್ಯತೀರ್ಥರಿಂದ ಬರೆಸಲ್ಪಟ್ಟಿತು. ಈ ಭಾಷ್ಯವು **''ಬಾಲ ಸಂಘಮಪಿ ಬೋಧಯೇದ್ಬುತಂ । ದುರ್ನೀ ರೂಪ ವಚನಂಚ ಪಂಡಿತೈಃ''** ಸುಲಲಿತವಾಗಿರುವುದರಿಂದ ಸಾಮಾನ್ಯರಿಗೂ ತಿಳಿಯುವಂತೆಯು, ಅರ್ಥ ಗಾಂಭೀರ್ಯವಿರುವುದರಿಂದ ಪಂಡಿತರು ಎಷ್ಟೆಷ್ಟು ವಿಚಾರ ಮಾಡಿದರೂ ಇನ್ನಷ್ಟು ವಿಚಾರ ಮಾಡುವಷ್ಟು ಅನೇಕಾರ್ಥಭರಿತವಾಗಿದೆ.

## ಶ್ರೀಮದಾಚಾರ್ಯರ ಭಾಷ್ಯ

ಶ್ರೀಮದಾಚಾರ್ಯರು ಭಾಷ್ಯವನ್ನು ರಚಿಸಲು ಉದ್ಯುಕ್ತರಾಗಿ ಆದಿಯಲ್ಲಿ ತಮ್ಮ ಅಭಿಷ್ಟದೇವನಾದ ಶ್ರೀಮನ್ನಾರಾಯಣನಿಗೆ ನಮಸ್ಕಾರ ರೂಪ ಮಂಗಳ ಶ್ಲೋಕವನ್ನು ನಿಬಂಧಿಸಿರುತ್ತಾರೆ. ಇದರಿಂದ ತಾವು ರಚಿಸಿದ ಗ್ರಂಥಕ್ಕೆ ಶ್ರೀಶನ ಅನುಮತಿ ಹಾಗೂ ಅನುಗ್ರಹ ಬೇಡಿದಂತಾಯಿತು ಮತ್ತು ತಾವು ಪ್ರಾರಂಭಿಸಿದ ಗ್ರಂಥವು ನಿರ್ವಿಘ್ನವಾಗಿ ಮುಗಿಯಬೇಕು. ತಾವು ಆ ರೀತಿ ಭಗವಂತನ ಸ್ತೋತ್ರ ಮಾಡದೆ ಇದ್ದಲ್ಲಿ ಪ್ರತ್ಯಕ್ಷ ಮತ್ತು ಮುಂದೆ ಅಪ್ರತ್ಯಕ್ಷ ಶಿಷ್ಯರು ಆ ರೀತಿ ಮಾಡದೇ ಇದ್ದಾರು ಎಂದು ಶಿಷ್ಯ ಶಿಷ್ಯಾರ್ಥಕ್ಕಾಗಿ ಮಂಗಳ ಶ್ಲೋಕವನ್ನು ರಚಿಸಿದರು. ಇದು ಅವಿಗೀತ ಶಿಷ್ಟಾಚಾರ ಸತ್ಸಂಪ್ರದಾಯವೆಂಬುದನ್ನು ಮಾನ್ಯ ಮಾಡಬೇಕೆಂದು ತೋರಿಸಿಕೊಟ್ಟಿದ್ದಾರೆ.

**ಹರಿಃ ಓಂ**
**ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಂ ।**
**ಜ್ಞೇಯಂ ಗಮ್ಯಂ ಗುರೋಂಶ್ಚಾಪಿ ನತ್ವಾ ಸೊತಾರ್ಥ ಮುಚ್ಯತೇ ॥**

ಸಮಸ್ತವಾದ ಕಲ್ಯಾಣಗುಣಗಳಿಂದ ಪರಿಪೂರ್ಣನಾದ, ಯಾವ ರೀತಿ ದೋಷರಹಿತನಾದ ಶಾಸ್ತ್ರಾದಿಗಳಿಂದಲೇ ಗಮ್ಯ(ತಿಳಿಯಲು)ನಾದ ಮತ್ತು ಅವನನ್ನೇ ಹೊಂದಲು ನನಗೆ ಜನಕನೂ, ಗುರುವೂ ಆದ ಶ್ರೀಮನ್ನಾರಾಯಣನಿಗೆ ವಂದಿಸಿ, ಬ್ರಹ್ಮಸೂತ್ರಗಳಿಗೆ ಯಥಾವತ್ತಾಗಿ ಅರ್ಥೈಸುತ್ತೇನೆ (ನನ್ನಿಂದ ಅರ್ಥವು



ಹೇಳಲ್ಪಡುತ್ತದೆ). ಈ ಶ್ಲೋಕದಲ್ಲಿ ಶ್ರೀಮದ್ಭಾಷ್ಯದಲ್ಲಿನ ನಾಲ್ಕು ಅಧ್ಯಾಯಗಳ ಭಾವವನ್ನು ಸಂಗ್ರಹವಾಗಿ ತಿಳಿಸಿಕೊಡುತ್ತಾರೆ. ತಥಾಚ **''ಗುಣೈಸ್ಸರ್ವೈರುದೀರ್ಣಂ''** ಎಂಬುವುದು ಮೊದಲನೇ ಅಧ್ಯಾಯದ ಅರ್ಥವು, **''ದೋಷವರ್ಜಿತಂ''** ಎಂಬುದು ಎರಡನೇ ಅಧ್ಯಾಯದ ಅರ್ಥವು, **''ಜ್ಞೇಯಂ''** ಎಂಬುದರಿಂದ ಮೂರನೇ ಅಧ್ಯಾಯದ ಅರ್ಥವು, **''ಗಮ್ಯಂ''** ಎಂಬುದರಿಂದ ನಾಲ್ಕನೇ ಅಧ್ಯಾಯದ ಅರ್ಥವು ಸಂಗ್ರಹವಾಗಿ ಸೂಚಿತವಾಗಿರುತ್ತದೆ.

ಶ್ರೀ ಪೂರ್ಣಪ್ರಜ್ಞರ ಭಾಷ್ಯದಲ್ಲಿ ನಾಲ್ಕು ಅಧ್ಯಾಯಗಳು, ಒಂದೊಂದು ಅಧ್ಯಾಯದಲ್ಲಿ ನಾಲ್ಕು ನಾಲ್ಕು ಪದಗಳು ಉಕ್ತವಾಗಿದೆ.

**ಪ್ರಥಮಾಧ್ಯಾಯಃ** (ಇದರಲ್ಲಿ ೪೦ ಅಧಿಕರಣಗಳು ೧೩೫ ಸೂತ್ರಗಳು ಇವೆ.)

ಈ ಅಧ್ಯಾಯದಲ್ಲಿ ವೇದಾದಿಗಳಿರತಕ್ಕ ಎಲ್ಲಾ ಶಬ್ದಗಳು ಭಗವಂತನಾದ ಶ್ರೀಮನ್ನಾರಾಯಣನನ್ನೇ ಮುಖ್ಯತಃ ಬೋಧಿಸುತ್ತದೆ.

ಒಂದನೇ ಪಾದದಲ್ಲಿ ಅನ್ಯತ್ರ ಪ್ರಸಿದ್ಧ ನಾಮ ಪಾದದಲ್ಲಿ ಇತರತ್ರ ಪ್ರಸಿದ್ಧ ಆಕಾಶ, ಪ್ರಾಣ ಇತ್ಯಾದಿ. ಜ್ಯೋತಿ, ಗಾಯತ್ರಿ ಇತ್ಯಾದಿ ಶಬ್ದಗಳು ವಿಷ್ಣು ವಾಚಕವೇ ಆಗಿರುತ್ತದೆ. ಭಗವಂತನು ವಾಚ್ಯಾನೇ ಅವ್ಯಾಚನಲ್ಲ. ಜ್ಞಾನ ದೃಷ್ಟಿ ಗೋಚರನೂ ಆಗಿರುತ್ತಾನೆ, ಜೀವನು ಪ್ರಕೃತಿ ಗುಣ ಬದ್ಧನು. ಮುಕ್ತಿದಾತೃತ್ವ ಶಕ್ತಿ ಅವನಿಗಿರುವುದಿಲ್ಲ. ಜಗತ್ ಸೃಷ್ಟಿ ಸಂಹಾರಕತ್ವವು ಜೀವನಿಗೆ ಇರುವುದಿಲ್ಲ. ಆದ್ದರಿಂದ ಜೀವನು ಜಿಜ್ಞಾಸೆ ವಿಷಯನಾಗಲಾರನು. ಬ್ರಹ್ಮಚರ್ಯ ಇತ್ಯಾದಿ ಹೇತುಗಳಿಂದ ಆನಂದಮಯನು ಶ್ರೀಹರಿಯೇ ಆಗಿರುತ್ತಾನೆ. ಅಂತಸ್ಥತ್ವ ಲಿಂಗವು ಸಮಸ್ತ ಹೃದಯ ಗುಹಾಪ್ರವಿಷ್ಟನು. ಇಂದ್ರಾದಿ ದೇವತಾಂತರ್ಯಾಮಿ, ಸರ್ವ ಪ್ರೇರಕನು ಭಗವಂತನೇ ಎಂದು ಈ ಪಾದದಲ್ಲಿ ಪರಮ ಮುಖ್ಯ ಪ್ರವೃತ್ತಿಯಿಂದ ವಿಷ್ಣುವೇ ಆಗಿರುತ್ತಾನೆಂದು ಸಮರ್ಥಿತವಾಗಿದೆ.

ಪ್ರಥಮಾಧ್ಯಾಯದಲ್ಲಿನ ಮೊದಲನೇ ಅಧಿಕರಣವನ್ನು ಜಿಜ್ಞಾಸಾಧಿಕರಣವೆಂದು ಇದರಲ್ಲಿ ಮೋಕ್ಷಾಕಾಂಕ್ಷಿಯು ಬ್ರಹ್ಮವಿಷಯಕ ಜಿಜ್ಞಾಸಾ ಮಾಡಲು ಪೂರ್ವದಲ್ಲಿ ಅಧಿಕಾರಿ ಆಗಬೇಕೆಂದು ತಿಳಿಸುತ್ತದೆ. ಅಧಿಕಾರಿ ಅಂದರೆ ಶಮದಮಾದಿ ಯುಕ್ತನಾಗಬೇಕು. ಶಮ ಇಂದ್ರಿಯನಿಗ್ರಹ ದಮ ಭಾಗವನ್ನಿಷ್ಠಾ ಬುದ್ಧಿಸಹಿತನಾಗಬೇಕು. ನಂತರವೇ ಭಗವಂತನ ವಿಷಯಕ್ಕೆ ವಿಚಾರ ಮಾಡಲು ಯೋಗ್ಯನಾಗುತ್ತಾನೆ.

**ಓಂ ಅಥಾಽತೋ ಬ್ರಹ್ಮ ಜಿಜ್ಞಾಸಾ ಓಂ**

ಅಥ – ಮೇಲೆ ತಿಳಿಸಿದಂತೆ ಶಮದಮಾದಿಯುಕ್ತನಾದ ನಂತರ (ಅಥ ಶಬ್ದವು ಮಂಗಳಾರ್ಥ ಸೂಚಕವೂ ಹೌದು.)

ಅತಃ – ಮೋಕ್ಷವೇ ಮುಖ್ಯ ಫಲಾಪೇಕ್ಷೆಗಾಗಿ.

ಬ್ರಹ್ಮ – ಬ್ರಹ್ಮನನ್ನು ಕುರಿತು.

ಜಿಜ್ಞಾಸಾ – (ಕರ್ತವ್ಯ) ವಿಚಾರ ಮಾಡಬೇಕು.

## ಬ್ರಹ್ಮ ಎಂದರೆ ಯಾರು ?

"ಬ್ರಹ್ಮಣಿ ಜೀವಾಃ ಸರ್ವೇಽಪಿ" ಎಂಬ ಪ್ರಮಾಣಾನುಸಾರ ಬೃಹ ಜೀವ ಜಾತಿ ಕಮಲಾಸನ ಶಬ್ದರಾಶಿಸು ಎಂದು ಬ್ರಹ್ಮ ಶಬ್ದಕ್ಕೆ ಐದು ಅರ್ಥಗಳು ಇರುವುದು. (ಬೃಹತ್, ದೊಡ್ಡ ಪೂರ್ಣ, ಜೀವನು ಬ್ರಾಹ್ಮಣರು, ಬ್ರಹ್ಮದೇವರು ಮತ್ತು ವೇದಗಳು) ಎಂಬ ರೂಢಿ ಇದೆ.

ಬ್ರಹ್ಮ ಶಬ್ದಕ್ಕೆ ಜೀವನೆಂದು ರೂಢ್ಯರ್ಥ ಇರುವುದಾದರೂ ಇಲ್ಲಿ ಜಿಜ್ಞಾಸಾ ಮಾಡಬೇಕೆಂದು ಹೇಳಿದ್ದು ಜೀವನನ್ನು ಕುರಿತಂತೆ ಅಲ್ಲ. ಏಕೆಂದರೆ ಜೀವನನ್ನು ಕುರಿತು ವಿಚಾರ ಮಾಡಲು ಅವನು ಸಿದ್ಧವಾದ ವಿಷಯನೇ ಆಗಿದ್ದಾನೆ, ಸಂದಿಗ್ಧವಾಗಿಲ್ಲ. ಜಿಜ್ಞಾಸಾ ಮಾಡಬೇಕಾದರೆ ವಿಷಯವು ಸಂದಿಗ್ಧವಾಗಿರಬೇಕು. **"ಸಂದಿಗ್ಧೋಹಿ ವಿಷಯಃ"** ಈ ರೂಢ್ಯರ್ಥದಿಂದ <u>ಬಾಧ</u> ಬರಬಹುದೆಂದು ಅಭಿಪ್ರಾಯಪಟ್ಟು ಆಚಾರ್ಯ ಶ್ರೀಮಧ್ವರು **"ಬ್ರಹ್ಮ ಶಬ್ದಶ್ಚ ವಿಷ್ಣಾವೇವ" ಅಪರ್ಯಾಯಾನ ಚ ಶಬ್ದೈರ್ಯೋಗಿತ್ಯೈಗುಣಃ ವಾಚತ್ಯೆ । ಪ್ರಾಚ್ಯತ್ವಾದ್ಬ್ರಹ್ಮಣಃ ಸಿದ್ಧಾ ಸಮಸ್ತ ಗುಣಪೂರ್ಣತಾ ॥ (ಭಾಷ್ಯ)** ಎಂದು ತಿಳಿಸಿಕೊಟ್ಟು ಶಂಕಾ ಪರಿಹಾರ ಮಾಡಿದ್ದಾರೆ. ಲಕ್ಷಣಾವೃತ್ತಿಯಿಂದ ಶೃತಿಸ್ಮೃತಿಗಳಲ್ಲಿ ಉಕ್ತವಾದ ಬ್ರಹ್ಮನು ಶ್ರೀಮನ್ನಾರಾಯಣನೇ ಮುಖ್ಯಾರ್ಥ. ಇವರೇ ರೂಢ್ಯರ್ಥಗಳು ಆಗುವುದಿಲ್ಲ.

**"ಬ್ರಹ್ಮಣೋ ಲಕ್ಷಣ ಮಾಹ"** ಬ್ರಹ್ಮ ಶಬ್ದಕ್ಕೆ ಪೂರ್ಣನೆಂದೂ ಇರುವುದರಿಂದ ಬ್ರಹ್ಮ ಎಂದರೆ ಗುಣಪೂರ್ಣನು, ಜೀವ ಅನ್ಯ ಧರ್ಮವುಳ್ಳವನು. ಜಗಜ್ಜನ್ಮಾದಿ ಕರ್ತನೆಂದು ಬ್ರಹ್ಮ ಸ್ವರೂಪವನ್ನು ತಿಳಿಸುತ್ತಾ ಅಂಥಾ ಗುಣಗಳಿಂದ ಪೂರ್ಣನಾದ ಶ್ರೀವಿಷ್ಣುವೇ ಅನ್ಯರಲ್ಲ.

**"ಓಂ ಜನ್ಮಾದ್ಯಸ್ಯ ಯತಃ ಓಂ"** (ಜನ್ಮಾಧಿಕರಣ) ಅಂತಹ ಬ್ರಹ್ಮನು ವೇದಾದಿ ಶಾಸ್ತ್ರಗಳ ಅಧ್ಯಯನದಿಂದಲೇ (ಶಾಸ್ತ್ರಿಯೋನಿತ್ವಾತ್) ಜ್ಞೇಯನೆಂದು ಸಮರ್ಥಿತವಾಗಿದೆ.

ಬ್ರಹ್ಮಸ್ವರೂಪನಾದ ಶ್ರೀ ಹರಿಯ ಜಗತ್ಕಾರಣತ್ವವನ್ನು ಉಪಕ್ರಮಾದಿ ತಾತ್ಪರ್ಯ ಲಿಂಗಾದಿಗಳಿಂದ ತಿಳಿಯಬಹುದು. (ತತ್ತುಸಮನ್ವಯಾತ್) ಬ್ರಹ್ಮ ಶಬ್ದಿತ ಪರಮಾತ್ಮನು ಅವ್ಯಾಚನಲ್ಲ ವಾಚ್ಯನೇ ಆಗಿರುತ್ತಾನೆ. (ಈ ಕ್ಷತೆರ್ನಾಶಬ್ದಂ) ಹೀಗೆ ಜಿಜ್ಞಾಸಾಧಿಕರಣ, ಜನ್ಮಾಧಿಕರಣ, ಶಾಸ್ತಯೋನಿತ್ವಧಿಕರಣ, ಸಮನ್ವಯಾಧಿಕಾರಣ ಮತ್ತು ಈ



ಕ್ಷತೀತ್ವಧಿಕರಣ ಈ ಐದು ಕರಣಗಳು ಪ್ರಥಮಾಧ್ಯಾಯಕ್ಕೆ ಪಾದಪೀಠವಾಗಿರುತ್ತದೆ.

ಈ ಪಾದದಲ್ಲಿ ಬ್ರಹ್ಮ ಶಬ್ದಿತ ಶ್ರೀವಿಷ್ಣು ವಿಚಾರ ಮಾಡಲಾಗಿ ಜಗಜ್ಜನ್ಮಾದಿ ಕರ್ತನೆಂದು ವೇದೈಕ ಗಮ್ಯನೆಂದು ಸಮಸ್ತ ಗುಣ ಪೂರ್ಣನೆಂದು ಸಯುಕ್ತಿಕವಾಗಿ ಸಮರ್ಥನೆ ಮಾಡಿರುತ್ತಾರೆ.

**ಎರಡನೇ ಪಾದದಲ್ಲಿ :** ಲಿಂಗಾತ್ಮಕಾನಾಂ ಶಬ್ದಾನಾಂ ವಿಷ್ಣೌ ಪ್ರವೃತ್ತಿಂ ದರ್ಶಯತ್ಯಸ್ಮಿನ್ ಪಾದೆ ಪ್ರಾಧ್ಯಾನ್ಯೇನ (ಭಾಷ್ಯ) ಏಳು ಅಧಿಕರಣಗಳು. ಇಲ್ಲಿ ಅನ್ಯತ ಪ್ರಸಿದ್ಧ ಲಿಂಗಾತ್ಮಕ ಶಬ್ದ ಸಮನ್ವಯವು ನಿರೂಪಿಸಲ್ಪಟ್ಟಿದೆ. ಐತರೇಯ ಅರಣ್ಯಕದ 'ಸರ್ವಗತತ್ವ'

**"ಓಂ ಸರ್ವತ್ರ ಪ್ರಸಿದ್ದೋಪದೇಶಾತ್ ಓಂ"** ಲಿಂಗವು ಸಾವಧಾರಣ ಬ್ರಹ್ಮ ಶಬ್ದ ಶ್ರವಣದಿಂದಲೂ ಅಶ್ರುತತ್ವಾತಿಗುಣಗಳ ಉಪಪತ್ತಿಯಿಂದಲೂ ವಿಷ್ಣುಬೋಧಕವೇ ಆಗಿದೆ. ಬೃಹದಾರಣ್ಯಕದ ಚೇತನಾ, ಚೇತನ ಸಮಸ್ತ ಪ್ರಪಂಚ ಸಂಹಾರಕತ್ವರೂಪ 'ಆತ್ತೃತ್ವವು' ವಿಷ್ಣುಬೋಧಕವೇ ಆಗಿರುವುದರಿಂದ ವೇದಮಾತೆಯಾದ ಅದಿತಿಯನ್ನು ಹೇಳುವುದಿಲ್ಲ. **"ಓಂ ಅತ್ತಾ ಚರಾಚರಗ್ರಹಣಾತ್ ಓಂ ಯಮಪ್ಯೇತಿ ಭುವನಂ ಸಾಂಪರಾಯೇಸನೋ ಹರಿಘೃತಮಿಹಾಯುಷೇಽತ್ತು ದೇವಃ ಇತಿ ಚ ಶೃತಿಃ"** (ಭಾಷ್ಯ(।) ಕಾಠಕದಲ್ಲಿ 'ಹೃದಯ, ಗುಹಾ ಪ್ರವಿಷ್ಟತ್ವ'ವೂ ಆತ್ಮಾ ಅಂತರಾತ್ಮಾ **"ಆತ್ಮಾಽಂತರಾತ್ಮೇತಿ ಹರಿರೇಕ ಏವದ್ವಿಧಾಸ್ಥಿತ"** (ಭಾಷ್ಯ) ಎಂಬುವ ಎರಡು ರೂಪಗಳಿಂದ ಸ್ಥೂಲದೇಹದಲ್ಲಿಯೂ, ಸ್ವರೂಪದೇಹದಲ್ಲಿಯೂ ಇರುವ ಹರಿಯ ಧರವೇ / ಛಂದೋಗ್ಯದಲ್ಲಿ 'ಚಕ್ಷುರಂತಸ್ಥ'ನು, ಅಮೃತತ್ವ, ಅಭಯತ್ವ, ಆಸಂಗತ್ವ, ಪೂರ್ಣಾನಂದತ್ವ, ಜೀವನಿಯಾಮಕತ್ವಾದಿ ಲಕ್ಷಣಾನ್ವಿತನಾದ್ದರಿಂದ ವಿಷ್ಣುವೇ/ ಬೃಹದಾರಣ್ಯಕದಲ್ಲಿ ಅಧಿದೈವಾದಿ ಪ್ರಕರಣದಲ್ಲಿ ಪ್ರಸಕ್ತನಾದ ಯಂಪೃಥಿವೀ ನವೇದ ಯಃ ಪೃಥಿವ್ಯಾ ಅಂತಹಃ ಇತ್ಯಾದಿನಾ ಅಧಿದೈವಾದಿಷು ತದ್ಧರ್ಮ ವ್ಯಪದೇಶಾದಿ, ವಿಷ್ಣು ದೇವಾಂತರ್ಯಾಮೀ – (ಭಾಷ್ಯ) 'ಅಂತರ್ಯಾಮಿ'ಯು ಅವಿಧಿತತ್ವ, ಪ್ರಕೃತಿ ಧರ್ಮಾಭಾವತ್ವ ರೂಪ ಲಕ್ಷಣಗಳಿಂದ ವಿಷ್ಣುವೇ ಹೊರತು ಅನ್ಯರಲ್ಲ. ಅಥರ್ವಣದ 'ಅದೃಶ್ಯತ್ವಾದಿಗುಣಕ'ನು ಋಗಾದಿ ವಿದ್ಯಾವಿಷಯನು ಶುದ್ಧ ಸ್ವರ್ಣ ರೂಪನು ಆಗಿರುವುದರಿಂದ ಚತುರ್ಮುಖ ಬ್ರಹ್ಮನೂ ಅಲ್ಲ ರುದ್ರನು ಸರ್ವಥಾ ಆಗುವುದಿಲ್ಲ. ಚಿದಚಿತ್ ಪ್ರಕೃತಿಯೂ ಅಲ್ಲ. ಅವನು ಶ್ರೀ ಹರಿಯೇ.

ಛಂದೋಗ್ಯದ 'ವೈಶ್ವಾನರ ಅಜ್ಞಾ ವಿಷ್ಣೋಃ ಸಾಧಾರಣಸ್ಯ ವೈಶ್ವಾನರ ಶಬ್ದಸ್ಯ ವಿಷ್ಣಾದೇವ ಪ್ರಸಿದ್ಧಾತ್ಮ ಶಬ್ದೇನದ್ವೈಷ್ಣಾವರೊ ವಿಷ್ಣುವೇದ' (ಭಾಷ್ಯ) ಶಬ್ದವು ಅಗ್ನಿಯಲ್ಲಿ ರೂಢವಾಗಿದೆ ಮತ್ತು ಆ ಅಗ್ನಿಯಲ್ಲಿ ಅನ್ನಪಾಚಕತ್ವ ಹೋಮಾಧಿಕರನತ್ವ

ರೂಪಲಕ್ಷಣಗಳೂ ಇವೆ. ಆದರೂ ನಿರವಕಾಶವಾದ ಆತ್ಮ ಶಬ್ದದಿಂದಲೂ ಗೀತಾಸಮಾಖ್ಯೇ ಬರುವುದರಿಂದಲೂ ವೈಶ್ವಾನರರು ವಿಷ್ಣುವೇ. ಅಂತೆಯೇ ವೈಶ್ವಾನರಾದಿ ಶಬ್ದಗಳು ವಿಷ್ಣು ವಾಚಕಗಳೆಂದು ತಿಳಿದು ಜ್ಞಾನಿಗಳೂ, ಅಜ್ಞಾನಿಗಳೂ ತಿಳಿಯದೇ ಜಡಾದಗ್ನಿಯ ಹೋಮಾಗ್ನಿಗಳನ್ನಾಚರಿಸುತ್ತಲಿರುವರು. ಆದ್ದರಿಂದಲೇ ಆ ಶಬ್ದ ಲಿಂಗಗಳನ್ಯೈತ್ರ ಪ್ರಸಿದ್ಧವಾಗಿದೆ. ಆದರೂ ವಿಷ್ಣುವಾಚಕವೆನ್ನಲೂ ವಿರೋಧವಿಲ್ಲೆಂದು ಜೈಮಿನಾಚಾರ್ಯರು, ವಿವಿಧ ಸೂತ್ರಗಳಿಂದ ಉಪಾಸಿಸಲು ಆಯಾ ದೇವತೆಗಳಲ್ಲಿ ಅಭಿವ್ಯಕ್ತಿಯಾಗುವ ಕಾರಣದಿಂದ ಆಯಾ ಸೂಕ್ತ ನಾಮಭೇದವೆಂದು ಆಶ್ಮರಥಾಚಾರ್ಯರು ಆಯಾ ದೇವತೆಗಳು ವಿಷ್ಣುವಿಗಧಿಷ್ಠಾನರಾಗಿರುವುದರಿಂದ ಅವರಲ್ಲಿ ವಿಷ್ಣುವಿನ ಅನುಸಂಧಾನ ಮಾಡಲು ಸೂಕ್ತ ವ್ಯವಸ್ಥೆ ಎಂದು ಶ್ರೀ ಭಗವಾನ್ ಬಾದರಾಯಣರು ಉಪದೇಶಿಸಿದ್ದಾರೆ.

**ತೃತೀಯ ಪಾದದಲ್ಲಿ** ೧೪ ಅಧಿಕರಣಗಳಿವೆ. ಇಲ್ಲಿ ಉಭಯತ್ರ ಪ್ರಸಿದ್ಧ ಶಬ್ದ ಸಮನ್ವಯ ಮಾಡಿದ್ದಾರೆ.

ಅಥರ್ವಣದಲ್ಲಿಯ 'ದ್ಯುಭ್ವಾದ್ಯಾಯತನ'ನು ಆತ್ಮ ಶಬ್ದ ಬಲದಿಂದಲೂ, ಮುಕ್ತ ಪ್ರಾಪ್ತನಾಗಿರುವುದರಿಂದಲೂ ಪ್ರಕರಣ ಬಲದಿಂದಲೂ ಕರ್ಮ ಫಲಾನುಪಜೀವ್ಯನಾದ್ದರಿಂದಲೂ ವಿಷ್ಣುವೇ, ಅಥರ್ವಣದ 'ಭೂಮಾ' ಪೂರ್ಣ ಸುಖನೆಂದು ಹೇಳಲ್ಪಟ್ಟಿರುವುದರಿಂದ ಹರಿಯೇ ಛಂದೋಗ್ಯಸ್ಥ 'ಅಕ್ಷರನು' ಆಕಾಶಾದಿಧಾರಕನು. ಅದೇ ಛಂದೋಗ್ಯದ 'ದಹರೇಸ್ಥಿತ'ನು ನಿರ್ಗತ ಪಾಪ್ಮನು, ಸುಕ್ತಪ್ರಾಪ್ತನೂ, ಸರ್ವೇಶ್ವರನೂ, ಜೀವಭಿನ್ನನೂ ಆಗಿದ್ದಾನೆ.

ಕಾಠಕದಲ್ಲಿ ಅನುಕೂಲ್ಯೇನಗೃಹ್ಯಮಾಣನು ಸ್ವಯಂ ಪ್ರಕಾಶನು, ಜಗದ್ಭಾಸಕನು ಆಗಿರುವನು. ಕಾಠಕದಲ್ಲಿ ಈಶಾನನು ಸರ್ವದೇವೋಪಾಸ್ಯನಾಗಿದ್ದಾನೆ. ಆದ್ದರಿಂದ ಈ ಶಬ್ದಲಿಂಗಗಳು ವಿಷ್ಣುವನ್ನೇ ಬೋಧಿಸುತ್ತಿವೆ.

ಜೈಮಿನ್ಯಾಚಾರ್ಯರೀತ್ಯ ಮಧುವಿದ್ಯೆ ಮೊದಲಾದವುಗಳಲ್ಲಿ ದೇವತೆಗಳಿಗೆ ಫಲಾರ್ಥವಾಗಿ ಅಧಿಕಾರವಿಲ್ಲವಾದರೂ ವಿಶೇಷ ಜ್ಞಾನಾರ್ಥವಾಗಿಯೂ ಮೋಕ್ಷದಲ್ಲಿ ಆನಂದಾತಿಶಯಕ್ಕೋಸ್ಕರವೂ ಅಧಿಕಾರವುಂಟೆಂದು ಶ್ರೀ ಬಾದರಾಯಣರು ಅಭಿಪ್ರಾಯಪಟ್ಟಿದ್ದಾರೆ.

ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲ. ಕಾಠಕ ಶೃತಿಸ್ಥ **ವಜ್ರ** ಶಬ್ದವು ಸರ್ವ ಜಗಚ್ಚೇಷ್ಟಕವಾಗಿರುವುದರಿಂದ ವಿಷ್ಣುಪರವಾಗಿದೆ. ಇಂದ್ರಾಯುಧ ಪರವಲ್ಲ. (ಜ್ಞೇಯೋನವೇದ್ಯೈಃ ಶೂದ್ರಾದ್ಯೈಃ – ಅಣುಭಾಷ್ಯ)



ಬೃಹದಾರಣ್ಯಕದ **ಜ್ಯೋತಿ** ಶಬ್ದವು ಛಂದೋಗ್ಯದ **ಆಕಾಶ** ಶಬ್ದವು ಬೃಹದಾರಣ್ಯಕದ **ಬ್ರಾಹ್ಮಣ** ಶಬ್ದವು ವಿಷ್ಣುವಾಚಕಗಳಾಗಿವೆ. ಏಕೆಂದರೆ ಆ ಶಬ್ದಗಳಿಂದ ವಾಚ್ಯವಾದ ಲೌಕಿಕ ನಾಮರೂಪಗಳಿಲ್ಲ. ಅವು ಬ್ರಹ್ಮನೆಂದು ಹೇಳಲ್ಪಟ್ಟಿದೆ. ಅಮೃತವಾಗಿವೆ. ಸ್ವಪ್ನಾದಿದ್ರಷ್ಟತ್ವ ಅಸಂಗತ್ವ ರೂಪಧರ್ಮಯುಕ್ತವಾಗಿದೆ.

**ನಾಲ್ಕನೆಯ ಪಾದದಲ್ಲಿ** ಏಳು ಅಧಿಕರಣಗಳಿವೆ. ಅನ್ಯತ್ರೈವ ಪ್ರಸಿದ್ಧ ಶಬ್ದಗಳ ಸಮನ್ವಯವು ಇಲ್ಲಿ ಹೇಳಲ್ಪಟ್ಟಿದೆ. ಬಲವತ್ತರ ಶ್ರುತಿ ಲಿಂಗಾದಿಗಳಿಂದ ಅನ್ಯತ್ರ ಪ್ರಸಿದ್ಧ ಶಬ್ದಗಳು ವಿಶೇಷ ಹೇತುಗಳಿಂದ ವಿಷ್ಣುವಿನಲ್ಲಿ ಪ್ರವೃತ್ತವಾಗಿದೆ ಎನ್ನುವುದನ್ನು ಸಾಧಿಸುತ್ತಾರೆ. ಕಾಠಕದ **ಅವ್ಯಕ್ತ** ಶಬ್ದವು ಪ್ರಧಾನ ಪರವಾದರೂ ಅವ್ಯಕ್ತ ನಿಷ್ಠಪರಾವರತ್ವಾದಿ ಧರ್ಮಗಳು ವಿಷ್ಣು ಅಧೀನವಾಗಿರುವುದರಿಂದ ಅವನೇ ಅವ್ಯಕ್ತ ಶಬ್ದ ವಾಚ್ಯನು.

**ವಸಂತಸೇನೆ ಜ್ಯೋತಿಷಾಯಚೇತ** ಇತ್ಯಾದಿ ಕರ್ಮಾಂಗಪರವಾದ **ಜ್ಯೋತಿ**ರಾದಿ ಶಬ್ದಗಳಾದರೂ ಮಹಾಯೋಗ ವೃತ್ತಿಯಿಂದ ಪರಮಾತ್ಮ ಬೋಧಕಗಳಾಗಿವೆ. ಬೃಹದಾರಣ್ಯಕದ **ಪಂಚಜನಾದಿ** "ಸಂಖ್ಯೋಪ ಸಂಗ್ರಣಾದವನಾನಾಭಾವಾದಿತಿರೇಕಾಚ್ಚ ಓಂ" (ಬ್ರ.ಸು.) ಸಂಖ್ಯಾವಾಚಕ ಶಬ್ದಗಳು ವಿಷ್ಣುಲಿಂಗವಿರುವುದರಿಂದ ತದ್ಬೋಧಕವೇ ಆಗಿದೆ. ತೈತ್ತಿರೀಯದ **ಆಕಾಶ ಆದಿ** ಶಬ್ದಗಳು ಆಕಾಶಾದಿಗಳಿಗೆ ಮೂಲ ಕಾರಣನಾದ ನಾರಾಯಣನನ್ನೇ ಮುಖ್ಯವಾಗಿ ಹೇಳುವವು. ಆಕಾಶಾದಿಗಳಲ್ಲಿ ಅವನು ನಿಯಮಕನಾಗಿರುವನು. ಮುಖ್ಯ ವೃತ್ತಿಯಿಂದ ಸರ್ವ ಶಬ್ದಗಳೂ ವಿಷ್ಣು ವಾಚಕವೇ ಸಂಶಯವಿಲ್ಲ. ತಥಾಪಿಲೋಕ ವ್ಯವಹಾರ ಸಿದ್ಧಿಯಾಗಬೇಕಾಗಿರುವುದರಿಂದ ಸಮಾಕೃಷ್ಟವಾಗಿ ಆ ಶಬ್ದಗಳು ಇತರ ಪದಾರ್ಥಗಳಲ್ಲಿ ಸಾಂಕೇತಿಕವಾಗಿ ವ್ಯವಹರಿಸಲ್ಪಡುತ್ತದೆ. **ಕರ್ಮಾದಿ ಜ್ಞಾನವೂ** ಬ್ರಹ್ಮ ಜ್ಞಾನಕ್ಕೆ ಸಾಧನವಾಗಿದೆ. ಆದ್ದರಿಂದ ವೈದಿಕ ಶಬ್ದಗಳು ಕರ್ಮದೇವತಾದಿಗಳನ್ನೂ ಪ್ರತಿಪಾದಿಸುತ್ತಿವೆ ಎಂದು ಜೈಮಿನಿಯು ಕರ್ಮಗಳಿಗೆ "ಪರಮಾತ್ಮ ಜ್ಞಾನಾರ್ಥಂ ಕರ್ಮಾದಿ ಕಮಪಿ ವದತೀತಿ ಜೈಮಿನಿ (ಭಾಷ್ಯ). ಅನಿತ್ಯ ಫಲಗಳನ್ನು ತೋರಿಸಿ ಜ್ಞಾನವೇ ಮೋಕ್ಷ ಕಾರಣವೆಂದು ತಿಳಿಸಿಕೊಡಲು ಕರ್ಮ ವಚನವೂ ಅವಶ್ಯವಾಗಿದೆ" ಎಂದು ಆಶ್ಮರಥ್ಯರು "ನಾನ್ಯಃ ಪಂಥಾ ಆಯನಾಯವಿದ್ಯತೇ, ಇತಿ ಪ್ರತಿಜ್ಞಾಸಿದ್ಧರ್ಲಿಂಗತ್ವೇನ ಕರ್ಮಾದಿಕಸಮುಚ್ಯತೇ" – ಇತ್ಯಾಷ್ಕರಥಃ (ಭಾಷ್ಯ) ಎಂದು ಜ್ಞಾನಾಂಗವಾಗಿ ಕರ್ಮಾನುಷ್ಠಾನವು ಅವಶ್ಯಕವೇ ಆದ್ದರಿಂದ ಕರ್ಮವಚನವೆಂದು ಔಡುಲೋಮಿಗಳು "ಉತ್ಕ್ರಮಿಷ್ಯತೋ ಮು ಮುಕ್ಷೋಃ ಕರ್ಮಾದಿನಾ ಭಾವ್ಯಂ ಸಾಧನ ಸಾಧನಾತ್ವೇನ ಅತಸದ್ವತ್ತಿ" – ಇತ್ಯೌಡಲುಮೀರ್ಮನ್ಯತೇ (ಭಾಷ್ಯ) ಸರ್ವಾಧಾರಭೂಷಿತನಾದ ಪರಮಾತ್ಮ ಕರ್ಮಧಾರನೂ ಆಗಿರುವುದರಿಂದ ಕರ್ಮಾಧಾರಭೂತ ಬ್ರಹ್ಮನನ್ನು ಜ್ಞಾಪಿಸಲು ಕರ್ಮೋಪದೇಶವೆಂದು <u>ಕಾಶಕತ್ಸ್ನರು</u>

ಅಭಿಪ್ರಾಯಪಟ್ಟಿದ್ದಾರೆ. ವೈರಾಗ್ಯ ಸಂಪದಿಚ್ಛುವು ಆಶ್ಮರಥ್ಯಮತವನ್ನು, ಜ್ಞಾನೇಚ್ಛುವು ಔಡುಲೋಮಿ ಜೈಮಿನಿಗಳ ಮತವನ್ನು, ಜ್ಞಾನಿಯು ಕಾಶಕೃತ್ಯ ಮತವನ್ನು ಅನುಸರಿಸಿ ಜ್ಞಾನದ್ವಾರಾಪರೋಕ್ಷ ಪಡೆಯಬಲ್ಲವನಾದ್ದರಿಂದ ಈ ಋಷಿಗಳಲ್ಲಿ ಪರಸ್ಪರ ವಿರೋಧವಿಲ್ಲ. ಅವರು ಬಾದರಾಯಣ ಮತ್ಯೈಕದೇಷವನ್ನೇ ಹೇಳಿದ್ದಾರೆ. **ಪ್ರಕೃತಿ** ಮುಂತಾದ ಸ್ತ್ರೀಲಿಂಗವಾಚಕ ಶಬ್ದಗಳು ಶೂನ್ಯ ತುಚ್ಛ ಮೊದಲಾದ ಎಲ್ಲ ಶಬ್ದಗಳು ಪರಮಾತ್ಮ ವಾಚಕಗಳೇ ಆಗಿವೆ.

ಇಂತು ಪ್ರಥಮಾಧ್ಯಾಯದಲ್ಲಿ ಶಬ್ದಗಳು ಅವಯವಾರ್ಥ ಸಂಬಂಧದಿಂದ ಪ್ರವೃತ್ತಿಗಳಾದ ಕಾರಣ ಅನ್ಯತ್ರ, ಉಭಯತ್ರ, ಅನ್ಯತ್ರೈವಗಳಲ್ಲಿಯ ಪ್ರಸಿದ್ಧವಾದ ಎಲ್ಲಾ ಶಬ್ದಗಳಿಂದಲೂ ಶ್ರೀಮನ್ನಾರಾಯಣನೇ ವಾಚ್ಯನಾದುದರಿಂದ ಅನಂತ ಗುಣಪೂರ್ಣನೆಂದು ಸಮರ್ಥವಾಗಿದೆ.

ಆದರೆ ಶ್ರೀಹರಿಗೆ ಅನಂತ ಗುಣಪೂರ್ಣತ್ವವು ಕೂಡುವುದಿಲ್ಲ ಕಾರಣ ಯುಕ್ತಿಶೃತಿ ಸ್ಮೃತಿಗಳಿಂದ ಬರುವ ಶಬ್ದಗಳಿಂದ ವಿರೋಧವು ಕಂಡುಬರುತ್ತದೆ. ಆದ್ದರಿಂದ ಶ್ರೀವಿಷ್ಣುವಿಗೆ ದೋಷಗಳು ಏಕೆ ಇರಬಾರದೆಂಬ ಶಂಕಾಪರಿಹಾರಕ್ಕಾಗಿ **ಎರಡನೇ ಅಧ್ಯಾಯವು ಪ್ರವೃತ್ತವಾಗಿದೆ.** ಉಕ್ತೇಽರ್ಥೇಽ ವಿರೋಧಂ ದರ್ಶಯತ್ಯನೇನಾಧ್ಯಾಯೇನ – ಭಾಷ್ಯ.

ಪ್ರಥಮ ಪಾದದಲ್ಲಿ ಹನ್ನೊಂದು ಅಧಿಕರಣಗಳಿವೆ. ಇದರಲ್ಲಿ ಯುಕ್ತಿ ವಿರೋಧವು ಪರಿಹೃತವಾಗಿದೆ. **ವಿಷ್ಣುವು ಜಗತ್ಕಾರಕನಲ್ಲ**ವೆಂದು ಹೇಳುವ ಪಾಶುಪತಾದಿ ಸ್ಮೃತಿಗಳು ಪ್ರಮಾಣವಲ್ಲ. ಅವು ವೇದ ವಿರುದ್ಧವಾದ ಯುಕ್ತಿಗಳು, ಉಪಾದೇಯವಲ್ಲ. **ಮೃದಬ್ರವೀತ್** (ಓಂ ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಂ ಓಂ) ಇತ್ಯಾದಿ ಅಸಾಧ್ಯ ವಿಷಯಕ ವೇದ ವಾಕ್ಯಗಳು ಮೃದಭಿಮಾನಿದೇವತಾದಿ ಪರವಾಗಿರುವುದರಿಂದ ಪ್ರಮಾಣವೇ ಆಗಿವೆ. **ಈ ಜಗತ್ತಿಗೆ ಅಭಾವವೇ ಕಾರಣ – ಕರ್ತ ಇಲ್ಲ – ಜೀವನೇ ಜಗತ್ಕರ್ತ – ಅಚೇತನವೇ ಕರ್ತ – ಪ್ರಧಾನವೇ ಕರ್ತ** ಎಂಬಿತ್ಯಾದಿ ಮತಗಳು ವೇದವಿರುದ್ಧವಾಗಿವೆ. ಪರಮಾತ್ಮ ಜೀವನಲ್ಲ. ಘಟ ನಿರ್ಮಾಣದಲ್ಲಿ ಕುಲಾಲನಿಗಿದ್ದಂತೆ, ಪರಮಾತ್ಮನಿಗೆ ಜಗತ್‌ಸೃಷ್ಟಿಯಲ್ಲಿ ಸ್ವತಂತ್ರ ಸಾಧನಾಪೇಕ್ಷೆಯು ಇಲ್ಲ. ಸ್ವರೂಪ ಸಾಮರ್ಥ್ಯದಿಂದಲೇ ಅವನು ಸರ್ವವನ್ನೂ ನಿರ್ಮಾಣ ಮಾಡಬಲ್ಲ. ಜೀವನು ಪರಾಧೀನನು. ಸ್ವತಂತ್ರನಲ್ಲ. ಅವನು ಸೃಷ್ಟಿಕರ್ತನಾಗಲಾರನು. ಕೇವಲ ಶ್ರುತಿ ಪ್ರಮಾಣ ಸಾಧ್ಯನಾದ ಬ್ರಹ್ಮನ ವಿಷಯದಲ್ಲಿ ಯುಕ್ತಿ ವಿರೋಧಕ್ಕೆ ಅವಕಾಶವೇ ಇಲ್ಲ. ಶ್ರೀಹರಿಯು ಆನಂದೋದ್ರೇಕದಿಂದ ತನ್ನ ಸ್ವಭಾವವನ್ನನುಸರಿಸಿ ಪರರ ಪ್ರಯೋಜನಕ್ಕಾಗಿ, ಕೇವಲ ಲೀಲೆಯಿಂದ ಸೃಷ್ಟ್ಯಾದಿಗಳನ್ನು ಮಾಡುತ್ತಿದ್ದಾನೆ. (ಓಂ ನ ಪ್ರಯೋಜನತ್ವಾತ್ ಓಂ – ಓಂ ಲೋಕವತ್ತು ಲೀಲಾಕೈವಲ್ಯಂ ಓಂ) ಆ ಸ್ವಾಮಿಯು ಜೀವರ ಅನಾದಿ



ಕರ್ಮಾನುಸಾರಿ ಫಲವನ್ನು ಕೊಡುವನಾದ್ದರಿಂದ ಅವರಿಗೆ ವೈಷಮ್ಯವಿಲ್ಲ. (ಓಂ ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾ – ತ್ತಾಥಾಹಿದರ್ಶಯತಿ ಓಂ) ಅವನು ನಿಷ್ಕರುಣನೂ ಅಲ್ಲ. ಸ್ವತಂತ್ರನಾದ ಶ್ರೀಹರಿಯಲ್ಲಿ ಸರ್ವಗುಣ ಸದ್ಭಾವವೂ ಸರ್ವದೋಷಾಭಾವವೂ ಇದೆ. ಆದ್ದರಿಂದ ಅವನು ಗುಣಪೂರ್ಣನೆನ್ನಲು ಯಾವ ಯುಕ್ತಿ ವಿರೋಧವೂ ಇಲ್ಲ.

**ಎರಡನೇ ಪಾದದಲ್ಲಿ ಹನ್ನೆರಡು ಅಧಿಕರಣಗಳಿವೆ.** ಮತಾಂತರ ವಿರೋಧವಿಲ್ಲಿ ಪರಿಹೃತವಾಗಿದೆ. **ಸ್ವತಃ ಪ್ರವೃತ್ತಿಯು ಚೇತನ ಮಾತ್ರ ಸಿದ್ಧವಾಗಿರಲು ಅಚೇತನ ಪ್ರಧಾನವೇ ಜಗತ್ಕಾರಣ**ವೆನ್ನುವ ನಿರೀಶ್ವರ ಸಾಂಖ್ಯರು, **ಭೂಮಿಯ ದೆಶೆಯಿಂದ ತೃಣಾದಿಗಳು ಹುಟ್ಟಬೇಕಾದರೆ ಪರ್ಜನ್ಯನಿಗೆ ಅನುಗ್ರಾಹಕತ್ವವು ಹೇಗೋ ಹಾಗೆ ಪ್ರಕೃತಿಯಿಂದ ಜಗತ್ತು ಸೃಷ್ಟವಾಗಲು ಈಶ್ವರನು ಅನುಗ್ರಾಹಕರು ಅಷ್ಟೇ** ಎನ್ನುವ ನಿರೀಶ್ವರ ಸಾಂಖ್ಯರು, ಧರ್ಮಾ ಧರ್ಮ ಸ್ವರ್ಗನರಕಾದಿ ಸರ್ವಾಭಾವ ಬೋಧಕರಾದ ಚಾರ್ವಾಕರು, ಪ್ರಕೃತಿ ಸಂಬಂಧದಿಂದ ಜೀವನೋ ಅಥವಾ ಜೀವ ಸಂಬಂಧದಿಂದ ವೈಶೇಷಿಕ ಸಾಂಕ್ರಾಂತಿಕ ಬೌದ್ಧರು, ಮೊದಲಾದವರೆಲ್ಲರೂ ನಿರಾಕೃತರಾಗಿದ್ದಾರೆ. ಅಕ್ಷಪಾದ, ಕಾಣಾದ, ಸಾಂಖ್ಯಯೋಗ ಮೊದಲಾದ ಈ ಏಳು ಯೋಗಾಚಾರ್ಯರು, ಜಗತ್ತು ಸತ್ತಾಗಲಿ, ಅಸತ್ತಾಗಲಿ ಸದಸತ್ತಾಗಲಿ ಎನ್ನುವ ಜೈನರು, ಅವೈದಿಕ ಪಾಷಂಡ ಮತಬೋಧಕರಾಗುವುದರಿಂದ ನಿರಸ್ತರಾಗಿದ್ದಾರೆ. ಪಶುಪತಿಯೇ ಜಗತ್ಕರ್ತಾ ಎನ್ನುವ ಪಾಶುಪತವು, ಶಕ್ತಿಯೇ ಜಗತ್ಕಾರಣವೆನ್ನುವ ವಾಮ ಮತವು, ವೈಭಾಸವಾದ ಪಾಷಂಡ ಮತಗಳೇ ಆಗಿವೆ. ವೇದಾದಿ ಪ್ರಮಾಣ ವಿರುದ್ಧವಾಗಿರುವುದರಿಂದ ಈ ಎಲ್ಲಾ ಮತಗಳು ಅಪ್ರಮಾಣಿಕವೆಂದು ನಿರೂಪಿತವಾಗಿದೆ.

**ಮೂರನೇ ಪಾದದಲ್ಲಿ ಇಪ್ಪತ್ತು ಅಧಿಕರಣಗಳಿವೆ.** ಶ್ರುತಿಗಳಿಗೆ ಮೇಲೆ ನೋಟಕ್ಕೆ ತೋರುವ ಪರಸ್ಪರ ವಿರೋಧವನ್ನಿಲ್ಲಿ ಪರಿಹಾರ ಮಾಡುತ್ತಾರೆ ಮತ್ತು ಅದಿಭೂತ, ಅದಿ ದೈವ, ಜೀವ, ಪರಮಾತ್ಮಾದಿ ವಿಚಾರವು ಕೂಡ ಮಾಡಲ್ಪಟ್ಟಿದೆ. ವಾಯು ಆಕಾಶ ಇವುಗಳ ಅದಿದೈವ ಅದಿಭೂತ ದೇವತಾಸೂಕ್ಷ್ಮ ಸ್ಥೂಲರೂಪಾದಿಕವೆಲ್ಲವೂ ಉತ್ಪತ್ತಿ, ವಿಕಾರವುಳ್ಳದ್ದಾಗಿವೆ. ಅಲ್ಪ ಶಕ್ತಿಕವೂ ಅಹುದು. ಆಕಾಶಾದಿ ಶಬ್ದವಾಚ್ಯನಾದ ಪರಮಾತ್ಮನಾದರೋ ಉತ್ಪಾತ್ಯಾದಿ ಸಮಸ್ತದೋಷವಿದೂರನು. ಅಂತೆಯೇ ಪೃತಿವ್ಯಪ್ತೇಜೋ ಭೂತಗಳು ಅಧಿದೈವತೆಗಳು ಕೂಡ ಉತ್ಪತ್ತಿವುಳ್ಳವುಗಳಾಗಿವೆ. ಸಾದಿಯಾದ ಜಗತ್ತಿಗೆ ಭಗವಂತನೇ ಸ್ವಾಮಿಯು, ಅವನ ಇಚ್ಛೆಯಿಂದಲೇ ಸೃಷ್ಟಿ ಸಂಹಾರಾದಿಗಳುಂಟಾಗುತ್ತಿವೆ. ರುದ್ರಾದಿಗಳಿಂದ ಅಲ್ಲ. ಆಕಾಶಾದಿಗಳಿಗೂ ಮನೋವಿಜ್ಞಾನಿಗಳಿಗೂ ಉತ್ಪತ್ತಿಕ್ರಮ ವೈಪರಿತ್ಯೇನ ಲಯಕ್ರಮವು, ಶ್ರೀಹರಿಗೆ ಲಯವಿಲ್ಲ. ಜೀವನೂ ಅನಾದಿನಿತ್ಯನೇ ಆದರೂ ಪರಮಾತ್ಮಾಧೀನನಾಗಿ ಶರೀರದಿಂದ ಜನನ ಮರಣಾದಿ ವಿಕಾರ ಹೊಂದುವನು. ಜೀವನು ಅಣುವು, ಅಸ್ವತಂತ್ರನ

ಏಕದೇಕಪತಿತ ಹರಿಚಂದನ ಬಿಂದುವಿಗೆ ಸ್ವಾಂಶಗಳಿಂದ ಸರ್ವತ್ರ ವ್ಯಾಪ್ತಿಯು ಹೇಗೋ ಹಾಗೆ ದೇವ ವ್ಯಾಪ್ತಿಯು, ದೀಪಕ್ಕೆ ಪ್ರಕಾಶದಿಂದ ಹೇಗೋ ಹಾಗೆ ಮನುಷ್ಯ ವ್ಯಾಪ್ತಿಯು ಇರುವುದು. ಶ್ರೀ ಹರಿಯು ಜೀವಭಿನ್ನನು. **ಸರ್ವಂ ಖಲ್ವಿದಂ ಬ್ರಹ್ಮ** ಇತ್ಯಾದಿ ಜೀವೈಕ್ಯ ಬೋಧಕ ಶ್ರುತಿಗಳಿಗೆ ಗೌಣಪಕ್ಷವನ್ನಂಗೀಕರಿಸಿ ಜೀವನಲ್ಲಿರುವ ಪರಬ್ರಹ್ಮನ ಗುಣಗಳಿಗೆ ಸದೃಶ್ಯವಯವೂ ತವಧೀನವೂ ಆದ ಚಿದಾನಂದಾದಿ ಗುಣಗಳು ಜೀವಸ್ವರೂಪವೆಂದು ತಾತ್ಪರ್ಯ ಆಗಲಿ ಐಕ್ಯದಲ್ಲಿಲ್ಲ. ಸ್ವರೂಪೋಪಾದಿಯು ನಿತ್ಯವಾದ್ದರಿಂದಲು, ಬಿಂಬನಾದ ಹರಿಗೂ ಪ್ರತಿಬಿಂಬನಾದ ಜೀವನಿಗೂ ನಿತ್ಯ ಸನ್ನಿಧಿ ಉಂಟಾದ್ದರಿಂದಲೂ ಜೀವನು ನಿತ್ಯನು. ಪುರುಷನಿಗೆ ಯುಕ್ತ ವಯಸ್ಸು ಬಂದಾಗ ಪಿಂಸ್ತ್ವಾದಿ ಶಕ್ತಿಯು ಅಭಿವ್ಯಕ್ತವಾಗುವಂತೆ ಜೀವನಿಗೂ ಭಗವದನುಗ್ರಹದಿಂದ ಅವಿದ್ಯಾವರಣ ನಿವೃತ್ತಿಯಾಗಿ ಸ್ವರೂಪಾನಂದಾದಿಗಳು ಅಭಿವ್ಯಕ್ತವಾಗುವುವು. ಜೀವನಿಗೆ ಕರ್ತೃತ್ವ ಉಂಟು. ಹಾಗಲ್ಲದಿದ್ದರೆ ವಿಧಿ ನಿಷೇಧರೂಪಶಾಸ್ತ್ರಕ್ಕೆ ವೈಯರ್ಥ್ಯ ಬಂದೀತು ಮತ್ತು ಆ ಕರ್ತೃತ್ವವು ಕಲ್ಪಿತವೂ ಅಲ್ಲ. ಮುಕ್ತಿಯಲ್ಲಿ ಕೂಡ ಇರುತ್ತದೆ. ಆದ್ದರಿಂದ ಜೀವನಿಗೆ ಸ್ವತಂತ್ರ ಕರ್ತೃತ್ವವು ಇಲ್ಲವೆಂದೇ ಹೇಳಬೇಕಾಗಲಿ ಕರ್ತೃತ್ವವೇ ಇಲ್ಲವೆಂದಲ್ಲ. ಜೀವರು ಪರಮಾತ್ಮನ ಭಿನಾಂಶರು. ಅಲ್ಪ ಶಕ್ತಿಯುತರು. ಮತ್ಸ್ಯಾದಿ ಅವತಾರಗಳು ಸ್ವರೂಪಾಂಶಗಳು. ಅದೃಷ್ಟವೆಂದು ಕರೆಯಲ್ಪಡುವ ವಿದ್ಯಾಕರ್ಮ ಸಂಸ್ಕಾರಗಳೇ ಜೀವರಲ್ಲಿ ವೈಚಿತ್ರ್ಯವಿರಲು ಕಾರಣವಾಗಿವೆ. ಸ್ವರ್ಗ ಭೂವ್ಯಾದಿ ಸ್ಥಾನವಿಶೇಷದಿಂದಾಗಲಿ, ಅವರವರ ಇಚ್ಛೆಯಿಂದಾಗಲಿ ವೈಚಿತ್ರ್ಯವೂ ಏರ್ಪಟ್ಟಿಲ್ಲ.

**ನಾಲ್ಕನೇ ಪಾದದಲ್ಲಿ ಹದಿಮೂರು ಅಧಿಕರಣಗಳಿವೆ.** ಇದರಲ್ಲಿ ಯುಕ್ತಿಸಹಿತ ಶ್ರುತಿಗಳಿಗೆ ತೋರಿಬರುವ ಪರಸ್ಪರ ವಿರೋಧವು ಪರಿಹರಿಸಲ್ಪಟ್ಟಿದೆ. ಇಂದ್ರಿಯ ಮನೋವರ್ಚಸ್ಸುಗಳಿಗೆ ಉತ್ಪತ್ತಿವುಂಟು. ಇಂದ್ರಿಯಗಳ ಸಂಖ್ಯೆ ಮತ್ತು ಪರಿಮಾಣ, ಮುಖ್ಯ ಪ್ರಾಣನಿಗೂ ಉತ್ಪತ್ತಿ ಇದೆ. ಅವನು ಪರಮಾತ್ಮಾಧೀನನು ಮತ್ತು ಪ್ರಾಣಾದಿ ಪಂಚಪ್ರಾಣಗಳಿಗೆ ಅಧೀಶನು ಮುಖ್ಯಪ್ರೇರಕನು ಪರಮಾತ್ಮನೇ. ಜೀವನು ಅಸ್ವತಂತ್ರ ಕರ್ತನು. ದ್ವಾದಶೇಂದ್ರಿಯಗಳ ಸ್ವಾಮಿಯಾದ ಮುಖ್ಯಪ್ರಾಣನು ತ್ರಯೋದಶನಾದರೂ ಇಂದ್ರಿಯಗಳಲ್ಲಿ ಒಬ್ಬನಲ್ಲ. ಇಂದ್ರಿಯಾದ್ಯಧಿಷ್ಠನವಾದ ಶರೀರದ ಕರ್ತೃತ್ವವು ವಿರಿಂಚಿಯದಲ್ಲ. ಶ್ರೀ ಹರಿಯೇ ಸರ್ವ ಕರ್ತಾ. ಆದ್ದರಿಂದ ಪರಮಾತ್ಮನು ಜಗಜ್ಜನ್ಮಾದಿ ಕಾರಣನೆನ್ನಲು ಯಾವ ವಿರೋಧವೂ ಇಲ್ಲ.

## “ಸಾಧನ ವಿಚಾರೋಽಯಂ ಅಧ್ಯಾಯಃ” ಭಾಷ್ಯ

ಶ್ರೀ ಹರಿಪ್ರಾಪ್ತಿಗಾಗಿ ಸಾಧನ ನಿರೂಪಣೆಯು ಮಾಡಲ್ಪಟ್ಟಿರುವ ತೃತೀಯಾಧ್ಯಾಯಕ್ಕೆ ಸಾಧನಾಧ್ಯಾಯವೆಂದು ಹೆಸರು. ಪ್ರಥಮ ಪಾದದಲ್ಲಿ ಇಪ್ಪತ್ತು ಅಧಿಕರಣಗಳಿವೆ. ಇದರಲ್ಲಿ ವಿರಕ್ತಿಯನ್ನು ನಿರೂಪಿಸಿದ್ದಾರೆ. ಜೀವನು ಶರೀರ ಪಾತಾನಂತರವು ಪಂಚಭೂತಗಳಿಂದಲೂ ಪ್ರಾಕೃತೇಂದ್ರಿಯಗಳಿಂದಲೂ ಕೂಡಿಯೇ ಹೋಗುವನು. ಆದ್ದರಿಂದ ಈ ದೇಹ ವಿಯೋಗ ಮಾತ್ರದಿಂದಲೇ ಮುಕ್ತಿಯಾಗಲಾರದು ಎಂದರಿತು ಮೋಕ್ಷಕ್ಕೋಸ್ಕರ ವಿಶೇಷ ಸಾಧನವು ಅನುಷ್ಠೇಯವಾಗಿದೆ. ಜ್ಞಾನವೇ ಮೋಕ್ಷ ಸಾಧನವು. ಕಾಮ್ಯ ಕರ್ಮವಂತೂ ಅಲ್ಲವೇ ಅಲ್ಲ. ಕರ್ಮವನ್ನನುಭವಿಸಿ ಜೀವನು ಕರ್ಮಶೇಷದಿಂದ ಕೂಡಿ ಮತ್ತೆ ಜನ್ಮ ಹೊಂದುತ್ತಾನೆ. ಸ್ವರ್ಗಕ್ಕೆ ಧೂಮಾಭ್ರಾಕಾಶ ಚಂದ್ರಲೋಕಗಳು ಮಾರ್ಗವಾಗಿವೆ. ಭೂಮಿಗೆ ಬರುವಾಗ ಚಂದ್ರಾಕಾಶವಾಯು ಧೂಮಾಭ್ರವರ್ಷಲೋಕಗಳು ಕ್ರಮವಾಗಿ ಮಾರ್ಗವಾಗಿವೆ. ಈ ಗಮನಾಗಮನ ಕ್ಲೇಶವೇ ಫಲವಾದ ಕಾಮ್ಯಕರ್ಮವನ್ನು ಮಾಡದೆ ವಿರಕ್ತನಾಗುವುದು ಉಚಿತವು. ಪಾಪಕರ್ಮ ಮಾಡಿದವರಿಗೆ ನರಕದಲ್ಲಿ ಅಧಿಕತರ ದುಃಖಗಳಾಗುತ್ತವೆ. ಭಗವದ್ವೇಷದಿಂದ ಆಗುವ ರೌರವಾದಿ ಏಳು ನರಕಗಳಲ್ಲಿ ನಿತ್ಯ ದುಃಖವಾಗುತ್ತದೆ. ಆದ್ದರಿಂದ ಪಾಪಕರ್ಮವನ್ನು ಮಾಡಬಾರದು. ನರಕದಲ್ಲಿಯೂ ಪ್ರೇರಕನಾಗಿ ಈಶ್ವರನಿದ್ದಾನೆ. ಜೀವರಿಗೆ ಮಾರ್ಗಸಾಧನದಲ್ಲಿ ಪ್ರಯತ್ನವುಂಟು. ಆದರೂ ಫಲ ವಿಷಯದಲ್ಲಿ ಸ್ವಾತಂತ್ರ್ಯವಿಲ್ಲ. ಆದ್ದರಿಂದ ವೈರಾಗ್ಯ ಭಾಗ್ಯವನ್ನು ಅವಶ್ಯ ಸಂಪಾದಿಸಬೇಕು, ತಿರ್ಯಕ್, ಯಾತನಾ, ತಮೋರೋಪ ತ್ರಿವಿಧ ನರಕಗಳಲ್ಲಿ ತಮಸ್ಸಿನಲ್ಲಿ ಸುಖ ಲೇಶವೂ ಇಲ್ಲ. ಧೂಮಾದಿ ಮಾರ್ಗದಲ್ಲಿ ಹೋಗುವಾಗ ಆ ಅಭಿಮಾನಿ ದೇವತೆಗಳಿಂದ ಕೂಡಿ ಹೋಗುವುದುಂಟೇ ಹೊರತು ಆ ದೇವತೆಗಳಿಂದ ಐಕ್ಯವಾಗಿ ತತ್ವದ ಪ್ರಾಪ್ತಿಗಾಗಿ ಅಲ್ಲ. ಪುನರಾಗಮನದಲ್ಲಿ ಆಲಸ್ಯವಾಗುವುದಿಲ್ಲ. ದಾನಾದಿಗಳಲ್ಲಿ ಪ್ರವೇಶವೂ ಹೊರತು ಭೋಗಾರಂಭವಿಲ್ಲ. ಮೊದಲು ತಂದೆಯಲ್ಲಿ ತದ್ವಾರ, ತಾಯಿಯಲ್ಲಿ ಪ್ರವೇಶಿಸಿ ಯೋನಿಯಿಂದ ಜನಿಸುವನು. “ಓಂ ರೇತಃ ಸಿಗ್ಯೋಗೊಥ ಓಂ”. “ಓಂ ಯೋನೇಃ ಶರಿರಂ ಓಂ”. ಇವೆಲ್ಲಾ ವಿಚಾರ ಮಾಡಿ ಇತರತ್ರ ಸರ್ವತ್ರ ದುಃಖವೇ ಎಂದರಿತು ಜೀವನು ವೈರಾಗ್ಯವನ್ನವಲಂಬಿಸಿ ಶ್ರೀ ಹರಿಯ ಉಪಾಸನೆ ಮಾಡಬೇಕು.



ದ್ವಿತೀಯ ಪಾದದಲ್ಲಿ ಇಪ್ಪತ್ತು ಅಧಿಕರಣಗಳಿವೆ. ಇಲ್ಲಿ ಭಕ್ತಿಯನ್ನು ಹೇಳುತ್ತಾರೆ. ಮಹಾತ್ಮ್ಯ ಜ್ಞಾನಪೂರ್ವಕ ಸುದೃಢ ಸ್ನೇಹವೇ ಭಕ್ತಿ ಎನಿಸುವುದು. ಭಕ್ತಿಯನ್ನು ಹುಟ್ಟಿಸಲು ಭಗವಂತನ ಹಿರಿಮೆಯನ್ನು ನಿರೂಪಿಸುತ್ತಾರೆ. ಈಶ್ವರನೇ ಸ್ವಪ್ನ ಪ್ರದರ್ಶಕನು. ಜೀವನು ಪೂರ್ವದಲ್ಲನುಭವಿಸಿದ ಮಾನಸಿಕ ಸಂಸ್ಕಾರವನ್ನು ಉಪಾದಾನ ಕಾರಣವಾಗಿಟ್ಟುಕೊಂಡು ತನ್ನ ಸ್ವೇಚ್ಛೆಯಂತೆ ಶ್ರೀ ಹರಿಯ ಸ್ವಪ್ನ ಪದಾರ್ಥಗಳನ್ನು ಸೃಜಿಸುವನು. ಸ್ವಪ್ನವು ಶುಭಾಶುಭ ಸೂಚಕವಾಗಿದೆ. ಸತ್ಯವಾಗಿದೆ. ಸ್ವಪ್ನತಿರೋಭಾವವು ಶ್ರೀ ಹರೀಚ್ಛೆಯಂತೆಯೇ, ಕೇವಲ ಜ್ಞಾನದಿಂದಲ್ಲ. ಜಡಜ್ಞಾನವು ಮೋಕ್ಷಕೊಡಲು

ಶಕ್ತವಲ್ಲ. ಭಗವತ್ಪ್ರಸಾದ ಲಭ್ಯವಲ್ಲದೆ ಮೋಕ್ಷವು ದೇಹಾಭಿಮಾನ ಉಂಟುಮಾಡುವ ಜಾಗರದವಸ್ಥಾ ಸುಷಾಮ್ನಾದಲ್ಲಿ ಹರಿಪ್ರವೇಶರೂಪ ಸುಷುಪ್ತಿಯು, ಪ್ರಬೋಧ, ಮೂರ್ಛೆ, ಸ್ವಪ್ನ ಈ ಎಲ್ಲಾ ಅವಸ್ಥೆಗಳು ಶ್ರೀಹರಿ ಇಚ್ಛಾದಿಂದಲೇ ಉಂಟಾಗುವುವು. ವಿಶ್ವಾದಿ ಭಗವದ್ರೂಪಗಳಿಗೆ ಸ್ವಗತಭೇದವಿಲ್ಲ. ಪರಮಾತ್ಮನಿಗೆ ಪ್ರಾಕೃತರೂಪವಿಲ್ಲ. ಆದರೂ ಜ್ಞಾನಾನಂದಾದಿ ರೂಪವಿದ್ದೇಯಿದೆ. ಜಲದಲ್ಲಿ ಕಾಣುವ ಸೂರ್ಯ ಪ್ರತಿಬಿಂಬಗಳು ಸೂರ್ಯಭಿನ್ನವಾಗಿವೆ. ಅಂತೆಯೇ ಜೀವರು ಪರಮಾತ್ಮನ ಪ್ರತಿಬಿಂಬರು, ತದ್ಭಿನ್ನರು. ಭಕ್ತಿವಿನ ಜೀವನಿಗೆ ಈಶ್ವರ ಸಾದೃಶ್ಯಾಭಿವ್ಯಕ್ತಿಯು ಆಗುವುದಿಲ್ಲ. ಜ್ಞಾನಭಕ್ತ್ಯಾದಿ ಸಾಧಕರಲ್ಲಿ ತಾರತಮ್ಯವಿದೆ. ಆದ್ದರಿಂದ ಬ್ರಹ್ಮಾದಿಗಳಿಗೆ ಮಹಾಫಲವಿದೆ. ಅನ್ಯರಿಗೆ ಅಲ್ಪಫಲವಿದೆ. ಪರಬ್ರಹ್ಮನು ಸ್ವತಃ ಅವ್ಯಕ್ತನೇ, ಪುರುಷನು ಎಷ್ಟು ಪ್ರಯತ್ನಿಸಿದರೂ ಅದನ್ನು ನೋಡಲಾರನು. ಆದರೂ ಭಕ್ತಿಯಿಂದ ಪ್ರಸನ್ನನಾಗಿ ಶ್ರೀಹರಿಯು ಅಪರೋಕ್ಷಜ್ಞಾನವಿಷಯನಾಗುವನು. ಅವನು ಜ್ಞಾನಾನಂದಾದಿ ಗುಣ ಸ್ವರೂಪನು. ಅವನಿಗೂ, ಅವನ ಗುಣಗಳಿಗೂ ಭೇದವಿಲ್ಲ. ಪ್ರತಿಬಿಂಬರಾದ ಚತುರ್ಮುಖಾದಿ ಸ್ಥಾನಗಳಲ್ಲಿ ಭಕ್ತಿವಶನಾಗಿ, ಪರಮಾತ್ಮನ ವಿಚಿತ್ರ ಮಹಿಮೆಯಿಂದಲೂ ಬ್ರಹ್ಮಾದಿಗಳಲ್ಲಿ ಆನಂದ ತಾರತಮ್ಯವು ಉಪಪನ್ನವಾಗಿದೆ. ಧ್ಯಾನ ಕಾಲದಲ್ಲಿ ಮನಸ್ಸಿಗೆ ಕಾಣುವ ವಾಸನಾಮಯ ಪದಾರ್ಥವೇ ಶ್ರೀಹರಿ ಎಂದು ತಿಳಿಯಬಾರದು. ತದ್ವಿಲಕ್ಷಣನೇ ಆಗಿದ್ದಾನೆ. ಸರ್ವಕಾಲ, ಸರ್ವದೇಶಗಳಲ್ಲಿ ಸ್ಪಷ್ಟಾದ್ಯದೃಷ್ಟಕವೂ ಶ್ರೀಹರಿಯಿಂದಲೇ, ಸ್ವರ್ಗಾದಿ ಫಲ ವಿಷಯದಲ್ಲಿ ಈಶ್ವರನು ದಾತ, ಜೀವನು ಕರ್ತ, ಕರ್ಮಸಾಧನವಾಗಿದೆ. ಅಂದಮೇಲೆ ಈ ಕರ್ಮ ಫಲದಾತನು, ನಿರತಿಶಯ ಮಹಿಮೋಪೇತನೂ ಆದ ಶ್ರೀಹರಿಯಲ್ಲಿ ಭಕ್ತಿ ಮಾಡುವುದು ಅವಶ್ಯವಾಗಿದೆ. "ವ್ಯತಿರೇಶೊಗಂಧವತ್ತಥಾ ಚ ದರ್ಶಯತಿ" ಭಾಷ್ಯ.

ಮೂರನೇ ಪಾದದಲ್ಲಿ ೪೨ ಅಧಿಕರಣಗಳಿವೆ. ಇದರಲ್ಲಿ ಉಪಾಸನೆಯು ಹೇಳಲ್ಪಟ್ಟಿದೆ. ಜ್ಞಾನಸಾಧನವಾದ ಉಪಾಸನೆಯು ಎರಡು ವಿಧ. ಸಮಸ್ತ ಶುಭ ಶಾಸ್ತ್ರಾಭ್ಯಾಸ ರೂಪ ಶ್ರವಣ ಮನನಾದಿಗಳು ಮತ್ತು ಧ್ಯಾನ, ಯಥಾಶಕ್ತಿ ಸರ್ವವೇದೋಕ್ತ ಗುಣ ಉಪಾಸನಾ ಮಾಡಬೇಕು. ಆನಂದಾದಿ ಗುಣಗಳಂತೆಯೇ ಅಪತಹ ಪಾಪ್ಮತ್ವಾದಿಗಳು ಧ್ಯಾನ ಮಾಡಬೇಕು. ಅಯೋಗ್ಯ ಗುಣೋಪಾಸನೆಯಿಂದ ಅನರ್ಥವಾಗುವುದು. ಬ್ರಹ್ಮಾದಿಗಳು ಸರ್ವ ಗುಣೋಪಾಸನೆ ಮಾಡಿ ಮಹತ್ಫಲ ಹೊಂದುವರು. ಸತ್, ಚಿತ್, ಆನಂದ, ಆತ್ಮ ಎಂಬೀ ಗುಣಗಳಿಂದ ಎಲ್ಲ ಮುಮುಕ್ಷುಗಳು ಉಪಾಸಿಸಬೇಕು. ನಿರ್ದೋಷ ಜ್ಞಾನನಂದ ಸ್ವರೂಪನು, ಸ್ವಾಮೀ ಎಂದು ಚಿಂತಿಸಲು ಹರಿಯು ಮತ್ತು ತನ್ನ ಸಂಬಂಧವನ್ನು ತಿಳಿದು ದಾಸಭಾವವನ್ನವಲಂಬಿಸಿ ಭಗವತ್ಪ್ರೀತಿಯನ್ನು ಹೊಂದುತ್ತಾನೆ. ಜ್ಞಾನಿ ಉಪದೇಶದಿಂದ ಸ್ವಾಮಿಯ ಅಲೌಕಿಕ ಗುಣಗಳನ್ನು ಅರಿತು ಯಥಾಶಕ್ತಿ ಧ್ಯಾನ ಮಾಡಬೇಕು. ಆತ್ಮ ಶಬ್ದವು ಎಲ್ಲರಿಗೂ



ಎಲ್ಲ ಗುಣಗಳನ್ನೂ ಬೋಧಿಸುವುದಿಲ್ಲ. ಅವರವರಿಗೆ ಯೋಗ್ಯವಾದ ಗುಣಗಳನ್ನೇ ತಿಳಿಸುತ್ತದೆ. ಸಂಭೃತಿ ಪ್ರಕಾಶ ವ್ಯಾಪ್ತ್ಯಾದಿ ಗುಣಗಳು ದೇವೋಪಾಸ್ಯವಾಗಿದೆ. ಹಿಂಸಾ, ಛೇದನ, ಇತ್ಯಾದಿ ದುಷ್ಟ ವಿಷಯಕ ಉಪಾಸನೆ ಸರ್ವಥಾ ಮಾಡಬಾರದು.

ಮುಕ್ತರು ಸ್ವೇಚ್ಛೆಯಿಂದಲೇ ಉಪಾಸನೆ ಮಾಡುವವರಾಗಲಿ ಅನಿಷ್ಟ ಪರಿಹಾರಕ್ಕಾಗಿ ಅಲ್ಲ. ಮುಕ್ತಿಯಲ್ಲಿ ಬಂಧವಿಲ್ಲ. ವಿಧಿಪ್ರತ್ಯವಾಯುಗಳಿಲ್ಲ. ಆದ್ದರಿಂದ ಸ್ವೇಚ್ಛೆಯಿಂದ ಕರ್ಮ ಮಾಡುವರು ಅಥವಾ ಬಿಡುವರು. ಅಪರೋಕ್ಷ ಜ್ಞಾನಿಗಳಿಗೆಲ್ಲಾ ಮೋಕ್ಷವುಂಟು. ಉಪಾಸನೆ, ಯೋಗ್ಯತೆ ಇತ್ಯಾದಿಯನ್ನನುಸರಿಸಿ ಮೋಕ್ಷದಲ್ಲಿ ತಾರತಮ್ಯವಿದೆ. ಆದರೂ ವಿರೋಧ ಅಸೂಯಾದಿಗಳಿಲ್ಲ. ನಾಮಾದಿ ಪ್ರಾಣಪರ್ಯಂತ ದೇವತಾ ತಾರತಮ್ಯವಿದೆ. ಪ್ರಾಣಕ್ಕಿಂತಲೂ ಲಕ್ಷ್ಮೀದೇವಿಯು ಆ ಜಗಜ್ಜನನಿಗಿಂತ ಪರಮಾತ್ಮನು ಅಧಿಕನು. ಈಶ್ವರೇಚ್ಛಾನುಸಾರಿ ಸ್ವೇಚ್ಛೆಯಿಂದ ರಮಾದೇವಿಯು ಹರಿಸಮೀಪದಲ್ಲಿ ಮೂಲರೂಪದಿಂದಿರುತ್ತಾ ಭೂಮಿಯಲ್ಲಿ ಸೀತಾ ರುಕ್ಮಿಣ್ಯಾದಿ ರೂಪಗಳಿಂದ ಅವತರಿಸುವಳು. ಶ್ರೀದೇವಿಗೆ ಸಂಸಾರ ಬಂಧವೇ ಇಲ್ಲ. ಉಪಾಸನಾಧಿಕಾರ್ಯಗಳಲ್ಲಿ ಮುಖ್ಯಪ್ರಾಣನೇ ಅಧಿಕನು. ಲಕ್ಷ್ಮೀದೇವಿಯಾದರೋ ನಿತ್ಯ ಮುಕ್ತಳು. ಅನಾದಿ ಕಾಲದಿಂದಲೂ ಭಗವಂತನನ್ನು ಉಪಾಸಿಸುತ್ತಳೇ ಇರುವಳು. ಪ್ರೀತಿಪೂರ್ವಕವಾದ ಗುರೂಪದೇಶಯುಕ್ತ ಶ್ರವಣವೂ ಅಜ್ಞಾನವನ್ನು ನಾಶಮಾಡುವುದು. ಮನನವು ವೇದಾರ್ಥ ನಿರ್ಣಯವನ್ನುಂಟುಮಾಡಿ ಸಂಶಯ ಮಿಥ್ಯಾ ಜ್ಞಾನಗಳನ್ನು ನಾಶಮಾಡುವುದು. ಜ್ಞಾನ ಹುಟ್ಟುವಲ್ಲಿ ಶಿಷ್ಯ ಪ್ರಯತ್ನಕ್ಕಿಂತಲೂ ಗುರುಪ್ರಸಾದವೇ ಅಧಿಕ ಬಲಿಷ್ಠವಾಗಿದೆ. ಆದರೂ ಶ್ರವಣಾದಿಗಳನ್ನು ಅವಶ್ಯ ಮಾಡಬೇಕು. ಉತ್ತಮ ಗುರುಗಳು ಗ್ರಾಹ್ಯರೇ. ಪೂರ್ವ ಗುರುವಿಗಿಂತ ಅಧಮರು ಗ್ರಾಹ್ಯರಲ್ಲ. ಜ್ಞಾನವೇ ಮೋಕ್ಷಸಾಧನವಾಗಲೀ ಕರ್ಮವಲ್ಲ. ಮೋಕ್ಷವಾದರೋ ಅಪರೋಕ್ಷ ಜ್ಞಾನದಿಂದಲೇ ಆಗಲಿ ಪರೋಕ್ಷ ಜ್ಞಾನರೂಪ ವಿದ್ಯೆಯಿಂದಲ್ಲ. ಹರಿಗುರು ಭಕ್ತಿಯು ಶಮದಮಾದಿ ಗುಣ ಸಂಪತ್ತಿಯು, ಮೋಕ್ಷ ಪ್ರಯೋಜನಗಳು. ಮೋಕ್ಷವು ಸ್ವಬಿಂಬರೂಪದರ್ಶನ ಸಮಸಂಭವವಾಗಿದೆ. ದರ್ಶನ ಸಾಧನಗಳಲ್ಲಿ ಭಕ್ತಿಯೇ ಪ್ರಧಾನವು. ಅನಾದಿ ಯೋಗ್ಯತೆಯಂತೆ ಉಪಾಸನೆ ಇರುವುದು ಬ್ರಹ್ಮಾದ್ಯಂಗ ದೇವತೆಗಳಿಂದ ಕೂಡಿ ಭಗವದುಪಾಸನೆ ಮಾಡಬೇಕು. ಎಲ್ಲಾ ಗುಣಗಳು ಪೂರ್ಣವಾಗಲೆಂದು ಧ್ಯಾನಿಸಬೇಕು. ದುರಿತಾಗಿ ನಿವೃತ್ತಿಗಾಗಿ ನೃಸಿಂಹಾದಿ ರೂಪೋಪಾಸನೆ ಮಾಡಿ ಬಿಂಬೋಪಾಸನೆ ಮಾಡಬೇಕು. ಅಂಗಾಶ್ರಿತನೆಂಬುವ ಉಪಾಸನೆ ಸೂರ್ಯಾದಿ ದೇವತೆಗಳಿಗೆ ಹೊರತು ಅನ್ಯರಿಗಲ್ಲ.

**ನಾಲ್ಕನೇ ಪಾದ**ದಲ್ಲಿ ೧೧ ಅಧಿಕರಣಗಳಿವೆ. ಜ್ಞಾನ ಮಹಿಮೆಯು ಇಲ್ಲಿ ವರ್ಣಿತವಾಗಿದೆ. 'ಮೋಕ್ಷವೇ ಅಲ್ಲದೆ ಇತರ ಸಮಸ್ತ ಶುಭ ಫಲಗಳೂ ಅಪರೋಕ್ಷ ಜ್ಞಾನದಿಂದಲೇ ಸಿಗುತ್ತವೆ. ಕರ್ಮದಿಂದ ಆ ಫಲವು ಅತಿಶಯವಾಗುತ್ತದೆ' ಎಂದು

ಬಾದರಾಯಣರು ಹೇಳುತ್ತಾರೆ. ದೇವತಾನಿಷ್ಠ ಜ್ಞಾನವಿಶೇಕವಾಗಿದೆ. 'ಕರ್ಮ ಮಾತ್ರ ಸಾಧ್ಯವಾದ ಸ್ವರ್ಗಾದಿ ವಿಷಯದಲ್ಲಿ ವಿಶೇಷ ಫಲಕಾರಣವಾಗಿ ಜ್ಞಾನವು ಕರ್ಮಾಂಗವಾಗಿದೆ' ಎನ್ನುವ ಜೈಮಿನಿ ಮತ ದೇವತೇತರ ಮನುಷ್ಯನಿಷ್ಠೆ ಜ್ಞಾನವಿಶೇಕವಾಗಿದೆ. ಯಥಾಶಕ್ತಿ ಸಾಂಗವೇದಾಧ್ಯಯನ ಮಾಡಿದವರಿಗೇ ಜ್ಞಾನಾಧಿಕಾರವು. ವಿಷ್ಣುಭಕ್ತರಲ್ಲದವರಿಗೆ ದೇವಾಧಿಕಾರವೇ ಇಲ್ಲ. ದೇವಋಷಿಗಂಧರ್ವ ಮನುಷ್ಯರಿಗೆ ತಾರತಮ್ಯದಿಂದ ಜ್ಞಾನಾಧಿಕಾರವಿದೆ. ಅಪರೋಕ್ಷ ಜ್ಞಾನಿಗಳಲ್ಲಿ ಮನುಜರು ವಿಧಿನಿಷೇಧ ಬದ್ಧರು. ದೇವತೆಗಳು ಸ್ವೇಚ್ಛೆಯಂತೆ ಆಚರಣೆಯಲ್ಲಿ ಅನುಜ್ಞಾವುಳ್ಳವರು. ಬ್ರಹ್ಮದೇವರು ಸ್ವೇಚ್ಛಾಚರಣವಿಧಿ ವಿಷಯರು. ಜ್ಞಾನಿಯೂ ಕೂಡ ಸಂಪೂರ್ಣ ಫಲ ಸಿದ್ಧಿಗೋಸುಗ ವಿಹಿತ ಕರ್ಮ ಮಾಡಲೇಬೇಕು. ಜ್ಞಾನ ಸಹಕಾರಿಯಾದ ಕರ್ಮ ಫಲಾತಿಶಯವನ್ನು ಕೊಡುವುದು. ದೇವತೆಗಳಿಗೆ ಸಂಯಕ್ ಜ್ಞಾನವೂ ಅಸುರರಿಗೆ ವಿಪರೀತ ಜ್ಞಾನವೂ ಮನುಜರಿಗೆ ಮಿಶ್ರ ಜ್ಞಾನವೂ ಸ್ವಭಾವ ಸಿದ್ಧ (ಅಧಿಕಾರ)ವಾಗಿದೆ. ಸ್ವಭಾವವು ಅನಿವಾರ್ಯವು. ಜ್ಞಾನಾರ್ಥಿಯಾದವನು ವೇದ ಪದವಿಯನ್ನಾಗಲಿ ಭಗವಂತನ ಐಶ್ವರ್ಯದ ಗುಣಗಳನ್ನಾಗಲಿ ಆಶಿಸಬಾರದು. ಆ ಅಪೇಕ್ಷೆಯು ಪತನ ಹೇತುವಷ್ಟೇ. ಇಂದ್ರಿಯಾಭಿಮಾನಿ ದೇವತೆಗಳಿಗೆ ಅಧಿಕ ಫಲವು ಮನುಜರಿಗೆ ಸ್ವಲ್ಪ ಫಲವು ಉಂಟು. ಪಾಪ ಫಲದಲ್ಲಿ ದೇವತೆಗಳಿಗೆ ಭಾಗವಿಲ್ಲ. ಆ ಪಾಪ ಫಲವು ಅಸುರರಿಗಾಗುವುದು. ಯತಿಗಳು ಸರ್ವಾಶ್ರಮೋತ್ತಮರು. ಅವರಿಗಿಂತ ದೇವತೆಗಳು ಉತ್ತಮರು. ಜನಸಂಘಗಳಲ್ಲಿ ಕಂಡವರಿಗೆ ಜ್ಞಾನ ಪ್ರಕಟನೆ ಮಾಡಲು ಅಸುರರಿಗೂ ಜ್ಞಾನಸ್ವೀಕಾರವಾದೀತು. ಆದ್ದರಿಂದ ಜನತೆಯನ್ನು ಸೇರಬಾರದು. ಶ್ರವಣಾದಿ ಸಂಪತ್ತಿ ಪೂರ್ಣವಾದ ಜನ್ಮದಲ್ಲೇ ಪ್ರತಿಬಂಧಕವಿಲ್ಲದಿರಲು ಅಪರೋಕ್ಷಜ್ಞಾನ ಉಂಟಾಗುತ್ತದೆ. ಹಾಗೆಯೇ ಶರೀರ ಪಾತಾನಂತರದಲ್ಲಿಯೂ ಪ್ರತಿಬಂಧಕವಾದ ಪ್ರಾರಬ್ಧಕರ್ಮವಿಲ್ಲದಿದ್ದರೆ ಮೋಕ್ಷವು ಆಗುವುದು ಅಥವಾ ಪ್ರಾರಬ್ಧಕರ್ಮದ ಭೋಗವಾದ ನಂತರ ಜನ್ಮಾಂತರದಲ್ಲಿ ಮೋಕ್ಷವೂ ಆಗುವುದು.

**"ಫಲಂ ನಿಗದ್ಯತೇ ಅಸ್ಮಿನ್ ಅಧ್ಯಾಯೇ" –** ಭಾಷ್ಯ

ಚತುರ್ಥಾಧ್ಯಾಯದಲ್ಲಿ ಮೋಕ್ಷಾಖ್ಯ ಫಲ ನಿರೂಪಣೆ ಮಾಡಲ್ಪಟ್ಟಿದೆ.

**ಪ್ರಥಮ ಪಾದದಲ್ಲಿ ಎಂಟು ಅಧಿಕರಣಗಳಿವೆ.** ಇದರಲ್ಲಿ ಕರ್ಮಕ್ಷಯವನ್ನು ನಿರೂಪಿಸಿರುವರು. ನಿತ್ಯವೂ ಅವಶ್ಯವಾಗಿ ಆಚರಣೀಯವಾದ ಶ್ರವಣಾದ್ಯಾ ವೃತ್ತಿರೂಪ ಜ್ಞಾನ ಸಾಧನವನ್ನು ಹೇಳಿ ಕರ್ಮಕ್ಷಯವನ್ನು ಕೊನೆಯಲ್ಲಿ ಹೇಳುತ್ತಾರೆ. ಜ್ಞಾನಸಿದ್ಧಿಗಾಗಿ ಪುನಃ ಪುನಃ ಶ್ರವಣಾದಿಗಳ ಆವೃತ್ತಿ ಬಹುಸಲ ಮಾಡಬೇಕು. ("ಓಂ ಆವೃತ್ತಿರಸಕೃದುಪದೇಶಾತ್ ಓಂ") ಶ್ರೀಹರಿಯನ್ನು ಸ್ವಾಮೀ ಎಂದು ನಿತ್ಯವೂ



ಸರ್ವಪ್ರಾಕಾರದಿಂದಲೂ ಧ್ಯಾನಿಸಬೇಕು. ನಾಮ ಪ್ರತಿಮಾದಿಗಳೇ ಹರಿ ಅಲ್ಲ. ("ಓಂ ನ ಪ್ರತೀಕೇ ನಹಿ ಸಃ ಓಂ") ಆದರೆ ಅವುಗಳ ಅಂತರ್ಗತನಾಗಿದ್ದಾನೆ. ಸರ್ವೋತ್ತಮತ್ವ ರೂಪ ಉಪಾಸನೆಯೇ ಪರಮ ಪ್ರಸಾದಕ್ಕೆ ಕಾರಣವಾಗಿದೆ. ಭಗವಂತನ ಅಂಗಗಳಲ್ಲಿ ಆಶ್ರಯಿಸಿಕೊಂಡಿರುವುದರಿಂದ ಸೂರ್ಯಾದಿ ದೇವತೆಗಳು ಸ್ವಾಶ್ರಿತಾಂಗೋಪಾಸನೆಯನ್ನು ಸರ್ವದಾ ವಿಶೇಷ ಭಕ್ತಿಯಿಂದ ಮಾಡುತ್ತಾರೆ. ಸ್ಮರಣೋಪಾಸನೆಗಿಂತ ಧ್ಯಾನೋಪಾಸನೆ ಅಧಿಕವು. ಸ್ಮರಣವು ಸರ್ವದಾ ಕಾರ್ಯವು. ಯಾವ ದೇಶದಲ್ಲಿ ಯಾವ ಕಾಲದಲ್ಲಿ ಯಾವ ಆಸನ ವಿಶೇಷದಲ್ಲಿ ಧ್ಯಾನಕ್ಕೆ ಅನುಕೂಲವಾದ ಏಕಾಗ್ರತೆ ಸಿದ್ಧಿಸುವುದೋ ಆ ದೇಶ ಕಾಲಾಸನಗಳಲ್ಲಿ ಹರಿಧ್ಯಾನ ಮಾಡಬಹುದು. ಮೋಕ್ಷಪರ್ಯಂತವು ಉಪಾಸನೆ ಅವಶ್ಯಕವಾಗಿದೆ. ವೀತಶೋಕರಾದ ಮುಕ್ತರು ಸ್ವಾಭಾವಿಕವಾಗಿ ಶ್ರೀಹರಿಯನ್ನು ಉಪಾಸಿಸುತ್ತಿರುವರು. ಅಪರೋಕ್ಷ ಪೂರ್ವತನ ಕರ್ಮವು ದ್ವಿವಿಧವಾಗಿದೆ. (೧) ಪ್ರಾರಬ್ಧವು – ಇದು ನಶಿಸುವುದಿಲ್ಲ. ಇದನ್ನು ಭುಂಜಿಸಿ ಜ್ಞಾನಿಯು ಮೋಕ್ಷ ಹೊಂದುತ್ತಾನೆ. (೨) ಪ್ರಾರಬ್ಧವು ಎರಡು ವಿಧ. ಇಷ್ಟವೆಂದು ಅನಿಷ್ಟವೆಂದು. ಇಷ್ಟವು ನಶಿಸುವುದಿಲ್ಲ. ಅನಿಷ್ಟವು ನಷ್ಟವಾಗುವುದು. ಹಾಗೆಯೇ ಅಪರೋಕ್ಷಾ ನಂತರ ಕಾಲೀನ ಕಾಮ್ಯ ಕರ್ಮಗಳಲ್ಲಿ ಇಷ್ಟವು ಹೊಂದಿಕೊಂಡಿರುತ್ತದೆ. ಅನಿಷ್ಟವು ಅಂಟದೇ ನಶಿಸುವುದು. ಜ್ಞಾನಿಯು ಮಾಡುವ ಅಕಾಮ್ಯ ಕರ್ಮವು ಮಹತ್ಪುಣ್ಯ ಫಲಕವಾಗಿದೆ. ಅನಂತವಾಗಿದೆ. ಜ್ಞಾನಿಗೆ ಸಂಚಿತ ಕರ್ಮನಾಶವು ಆಗಾಮಿ ಕರ್ಮದ ಅಶ್ಲೇಷವೂ ಆಗುವುದು. ಮಿಥ್ಯಾಜ್ಞಾನಿಗೆ ಪೂರ್ವಪುಣ್ಯ ನಾಶವು ಆಗಾಮಿ ಕರ್ಮ ಆಶ್ಲೇಷವೂ ಆಗುವುದು. ಪ್ರಾರಬ್ಧ ಭೋಗಾವಸಾನದಲ್ಲಿ ಅಂಧತಮಃ ಪ್ರಾಪ್ತಿಯಾಗುವುದು. ವಿಷ್ಣುದ್ವೇಷಿಗೆ ಅನುತ್ಥಾನತಮಃ ಪ್ರವೇಶವಾಗುವುದು. ಆಗ ಪೂರ್ವಪುಣ್ಯ ನಾಶವಲ್ಲದೇ ಉತ್ತರ ಪುಣ್ಯದ ಆಶ್ಲೇಷವೂ ಆಗುವುದು. ("ಓಂ ತದಧಿಗಮ ಉತ್ತರ ಪೂರ್ವಾಘ ಯೋರಶ್ಲೇಷ ವಿನಾಶೌತದ್ವ್ಯಪ ದೇಶಾತ್ ಓಂ") ಜ್ಞಾನಿಯಾದವನು ಆನಂದರೂಪ ಮೋಕ್ಷ ಹೊಂದುವನು.

**ಎರಡನೇ ಪಾದದಲ್ಲಿ ೧೦ ಅಧಿಕರಣಗಳಿವೆ.** ಇಲ್ಲಿ ಕರ್ಮ ನಾಶಾನಂತರವಾಗುವ ದೇಹಕ್ಷಯಾದಿ ಪ್ರಕಾರವನ್ನು ಹೇಳುವರು. ದೇವತೆಗಳಿಗೆ ಸ್ವೋತ್ತಮ ಪ್ರವೇಶವೇ ಲಯವು. ದೇವತೇತರಿಗೆ ಬ್ರಹ್ಮನಾಡೀದ್ವಾರಾ ದೇಹೋತ್ಕ್ರಮಣವೇ ಲಯವು. ವಾಗಭಿಮಾನಿನಿ ಉಮಾದೇವಿಯು ಮನೋಮಾನ್ಯ ರುದ್ರನಲ್ಲಿಯೂ, ಚತುರ್ಮುಖನು ಪರಮಾತ್ಮನಲ್ಲಿಯೂ ಲಯ ಹೊಂದುವರು. ಇತರ ದೇವತೆಗಳು ಮೊದಲು ಅಜ್ಞಾದಿ ಭೂತಾಭಿಮಾನಿ ದೇವತೆಗಳಲ್ಲಿ ಲಯ ಹೊಂದುವರು. ಪ್ರಕೃತ್ಯಭಿಮಾನಿಯಾದ ಲಕ್ಷ್ಮೀದೇವಿಯು ಪರಮಾತ್ಮನಲ್ಲಿ ಲಯ ಹೊಂದುವುದಿಲ್ಲ. ಆ ದೇವಿಗೆ ಪರಮಾತ್ಮನಿಂದ ಸರ್ವಸಾಮ್ಯವಿಲ್ಲವಾದರೂ ದೇಶಕಾಲವ್ಯಾಪ್ತಿಯಿಂದ

ಸಮನಾಗಿರುವಳು. ಆಕೆಗೆ ಸಂಸಾರೋಪ ಕ್ರಮವೇ ಇಲ್ಲ. ಆಕೆಯು ನಿತ್ಯ ಮುಕ್ತಳು. ಪಂಚಭೂತನಿವಿಷ್ಟರಾದ ದೇವತೆಗಳೆಲ್ಲರೂ ವಿರಿಂಚದ್ವಾರ ಪರಿಪ್ರವೇಶ ಗೈಯ್ಯುವರು. ಹರೀಚ್ಛೆಗೆ ಅವಿರೋಧವಾಗಿಯೇ ದೇವತೆಗಳ ಇಚ್ಛೆಯಿರುವುದು. ಮುಕ್ತಿಯಲ್ಲಿಯೂ ದೇವಾದಿ ಸರ್ವರಿಗೂ ಸ್ವಾತಂತ್ರ್ಯವಿಲ್ಲ. ಸರ್ವದಾ ಭಗವದ್ವಶರಾಗಿಯೇ ಇರುವರು. ದೇಹೋತ್ಕ್ರಮಣ ಕಾಲದಲ್ಲಿ ಅಪರೋಕ್ಷಜ್ಞಾನಿಯು ಜ್ಞಾನ ಸಾಮರ್ಥ್ಯದಿಂದಲೂ ಭಗವದನುಗ್ರಹದಿಂದಲೂ ಪರಮಾತ್ಮನಿಗೆ ಆವಾಸವಾಗಿರುವ ಹೃದಯಾಗ್ರಭಾಗವು ಪ್ರಕಾಶಯುತ ತತ್ಪ್ರಕಾಶಿತ ಸುಷುಮ್ನಾನಾಡಿದ್ವಾರ ಪ್ರಾಣ ಪರಮಾತ್ಮ ಸಹಿತವಾಗಿ ದೇಹದಿಂದ ಉತ್ಕ್ರಮಣವನ್ನು ಹೊಂದುವರು. ಜ್ಞಾನಯೋಗಿಗಳು, ಕರ್ಮಯೋಗಿಗಳು ಸ್ಮರಿಸಿ ಹೊಂದುವ ಬ್ರಹ್ಮ ಚಂದ್ರಮಾರ್ಗಗಳು ಗೀತೆಯಲ್ಲಿಯೂ ಹೇಳಲ್ಪಟ್ಟಿದೆ.

**ಮೂರನೇ ಪಾದದಲ್ಲಿ ಆರು ಅಧಿಕರಣಗಳಿವೆ.** ಇದರಲ್ಲಿ ಜ್ಞಾನಿಯು ಉತ್ಕ್ರಮವನ್ನು ಹೊಂದಿ ಹೋಗುವ ಮಾರ್ಗವೂ ಗಮ್ಯವು ನಿರೂಪಿಸಲ್ಪಟ್ಟಿದೆ. ಜ್ಞಾನವಂತನು ಉತ್ಕ್ರಮಿಸಿ ಚಿರಿಲೋಕವನ್ನು ಅಲ್ಲಿಂದ ಮುಖ್ಯವಾಯುಪುತ್ರನಾದ ಅತಿವಾಹಕ ವಾಯುಲೋಕವನ್ನು, ಅಲ್ಲಿಂದ ಕ್ರಮವಾಗಿ ಅಹರ್ಲೋಕ, ಶುಕ್ಲಪಕ್ಷ, ಮಾಸ, ಉತ್ತರಾಯಣ, ಸಂವತ್ಸರ, ತಟಿತ್, ವರುಣ, ಪ್ರಜಾಪತಿ, ಸೂರ್ಯ, ಚಂದ್ರ, ಮುಖ್ಯಾಗ್ನಿ, ಧ್ರುವ, ಮಹೇಂದ್ರ, ದ್ಯು, ಮುಖ್ಯ ಪ್ರಾಣ ಲೋಕಗಳನ್ನು ಹಂದುವನು. ಭಾರತೀರಮಣನು ಚತುರ್ಮುಖ ಬ್ರಹ್ಮಲೋಕವನ್ನು ಸೇರುವನು. ಇದು ಬಾದರ್ಯಾಚಾರ ಮತವು. ಜ್ಞಾನಿಗಳನ್ನು ಮುಖ್ಯಪ್ರಾಣನು ಪರಬ್ರಹ್ಮನಲ್ಲೇ ಕರೆದೊಯ್ದು ಸೇರಿಸುವನೆಂದು ಜೈಮಿನಿ ಮತ. ಆದರೂ ಅವರೀರ್ವರಲ್ಲಿ ವಿರೋಧವಿಲ್ಲ. ಏಕೆಂದರೆ ಅಪ್ರತೀಕಾಲಂಬನರನ್ನು ಪರಬ್ರಹ್ಮನಲ್ಲಿಯೂ, ಪ್ರತೀಕಾಲಂಬನರನ್ನು ಚತುರ್ಮುಖನಲ್ಲಿಯೂ, ಮುಖ್ಯ ಪ್ರಾಣನೇ ಸೇರಿಸುವನೆಂದು ಬಾದರಾಯಣರು ಪರಿಷ್ಕರಿಸಿರುವರು. ಪ್ರತೀಕವೆಂದರೆ ದೇಹವು ಅದರಲ್ಲಿ ಬ್ರಹ್ಮೋಪಾಸನೆ ಮಾಡಿದರು ಪ್ರತೀಕಾಲಂಬನರು. ಬ್ರಹ್ಮನ ವ್ಯಾಪ್ತತ್ವೋಪಾಸಕರು ಅಪ್ರತೀಕಾಲಂಬನರು.

**ನಾಲ್ಕನೇ ಪಾದದಲ್ಲಿ ೧೧ ಅಧಿಕರಣಗಳಿವೆ.** ಇದರಲ್ಲಿ ಚತುರ್ಮುಖನ ಹಿಂದೆ ಹೋಗಿ ಪರಬ್ರಹ್ಮನನ್ನು ಹೊಂದಿದವರಿಗೆ ಆಗುವ ಭೋಗವನ್ನು ನಿರೂಪಿಸಿರುವರು. ಜ್ಞಾನಿಯು ಪ್ರರಬ್ರಹ್ಮನ್ನು ಹೊಂದಿ, ಆವಿರ್ಭೂತಸ್ವ ಸ್ವರೂಪನಾಗಿರುವನು. ಆಗ ಸಂಸಾರಾವಸ್ಥೆಯಲ್ಲಿ ಸಿಗಲಾರದ ಸಾಯುಜ್ಯವನ್ನೈದಿದವರು ಪರಬ್ರಹ್ಮನ ದೇಹ ಸಂಬಂಧದಿಂದಲೇ ಪಿಶಾಚಾದಿಗಳಂತೆ ಅನುಭವಿಸುವರೆಂದು ಜೈಮಿನಿ ಮತವು. ಮುಕ್ತರು ಚಿನ್ಮಾತ್ರ ಸ್ವರೂಪರಾದ್ದರಿಂದ ಚಿನ್ಮಾತ್ರ ದೇಹದಿಂದಲೇ ಭೋಗವೆಂದು ಔಡುಲೋಮಿ ಮತವು ಇಚ್ಛಾಮಾತ್ರದಿಂದ ಮುಕ್ತರಿಗೆ ಭೋಗಪ್ರಾಪ್ತಿಯಾಗುವುದು. ("ಓಂ ಸಂಕಲ್ಪಾದೇವಚ ತ ಚ್ಛ್ರುತೆ ಓಂ") ಅವರಿಗೆ ಸ್ವೋತ್ತಮರು ಹೊರತು ಅನ್ಯರು



ಯಾರೂ ನಿಯಾಮಕರು ಇರುವುದಿಲ್ಲ. ಪ್ರಾಕೃತ ದೇಹವಿಲ್ಲದಿದ್ದರೂ ಚಿನ್ಮಾತ್ರ ದೇಹದಿಂದ ಭೋಗಸಂಪತ್ತಿಯಾಗುವದೆಮದು ಬಾದರಿಮತವಾಗಿರಲು ಮುಕ್ತರಿಗೆ ಇಚ್ಛಾನುಸಾರವಾಗಿ ಚಿನ್ಮಾತ್ರವಲ್ಲದೇ ಬೇರೆ ದೇಹದಿಂದಲೂ ಭೋಗವುಂಟೆಂದು ಜೈಮಿನಿ ಮತವಾಗಿದೆ. ಅವೆಲ್ಲವನ್ನೂ ಅಂಗೀಕರಿಸಿ ಶ್ರೀಬಾದರಾಯಣರು ಮುಕ್ತಿಯಲ್ಲಿ ಬಾಹ್ಯ ದೇಹವಿಲ್ಲದಿದ್ದರೂ ಭೋಗ ಸಂಭವವುಂಟು, ಪ್ರಾಕೃತ ದೇಹವನ್ನು ಸ್ವೀಕರಿಸಿದರೂ ಮುಕ್ತರಿಗೆ ದುಃಖವಿಲ್ಲ ಎಂದು ನಿರ್ಣಯವನ್ನು ದಯಪಾಲಿಸಿದರು.

ಮುಕ್ತರಿಗೆ ಜಗತ್ಸೃಷ್ಟ್ಯಾದಿ ವ್ಯಾಪಾರವಿಲ್ಲ, ಆದರೂ ಸಕಲೇಷ್ಟ ಸಿದ್ಧಿಯು ಉಂಟು. ಶಶ್ವದೇಕ ಪ್ರಕಾರವಾಗಿರುವವರಾದ್ದರಿಂದ ಅವರ ಆನಂದಾದಿಗಳಿಗೆ ವೃದ್ಧಿ ಹ್ರಾಸವಿಲ್ಲ. ಸಂಚಾರ, ದಾನ, ರಮಣ, ಉಪಶಮನಾದಿ ಭೋಗಗಳು ಅವರ ಸ್ವರೂಪಾನಂದಾದಿ ಗುಣಗಳಿಗೆ ವೃದ್ಧಿಹ್ರಾಸಗಳನ್ನುಂಟುಮಾಡುವುದಿಲ್ಲ. ಮುಕ್ತರಿಗೆ ಪುನಃ ಸಂಸಾರ ಪ್ರಾಪ್ತಿ ಇರುವುದಿಲ್ಲ ("ಓಂ ಅನಾವೃತ್ತಿಃ ಶಬ್ದಾದಿನಾವೃತ್ತಿಃ ಶಬ್ದಾತ್ ಓಂ")

॥ ಶ್ರೀ ಮಧ್ವೇಶಾರ್ಪಣಮಸ್ತು ॥

ನಿತ್ಯಾನಂದೋ ಹರಿಃ ಪೂರ್ಣೋನಿತ್ಯದಾ ಪ್ರಿಯತಾಂ ಮಮ ।
ನಮಸ್ತಸ್ಮೈ ನಮಸ್ತಸ್ಮೈ ನಮಸ್ತೈಚ ವಿಷ್ಣವೇ ॥